**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 30ನೇ ಜನವರಿ 2012**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಮಧ್ಯಾಹ್ನ 1 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

## 1. ಘನತೆವೆತ್ತ ರಾಜ್ಯಪಾಲರ ಭಾಷಣದ ಮಂಡನೆ

**ಸಭಾಪತಿಯವರು:–** ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

**ಕಾರ್ಯದರ್ಶಿ:–** ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

**ಕರ್ನಾಟಕ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದ ಭಾಷಣ**

**ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಮತ್ತು ಸನ್ಮಾನ್ಯ ಸದಸ್ಯರೇ,**

1. ಕರ್ನಾಟಕ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನು ಸ್ವಾಗತಿಸಲು ಅತೀವ ಹರ್ಷವೆನಿಸುತ್ತದೆ.

2. ಕರ್ನಾಟಕ ಜನತೆಗೆ ಸೇವೆ ಸಲ್ಲಿಸಲು ಮತ್ತು ರಾಜ್ಯದ ನಾಗರಿಕರ ಯೋಗಕ್ಷೇಮಕ್ಕಾಗಿ ಕೆಲಸ ಮಾಡಲು ಇದು ನನಗೆ ಒದಗಿಬಂದ ಸದವಕಾಶವೆಂದು ನಾನು ಭಾವಿಸುತ್ತೇನೆ. ನನ್ನ ಸರ್ಕಾರವು ಜನತೆಗೆ ಅತ್ಯಂತ ಫಲಪ್ರದ ಮತ್ತು ದಕ್ಷ ಆಡಳಿತವನ್ನು ಕೊಡಲು ಕಳೆದ ಮೂರೂವರೆ ವರ್ಷಗಳಿಂದ ಅವಿರತವಾಗಿ ಶ್ರಮಿಸುತ್ತಿದೆ. ಇನ್ನೂ ಹೆಚ್ಚಿನ ಜವಾಬ್ದಾರಿಯುತ ಆಡಳಿತ ನೀಡುವ ಒಂದು ದೃಢ ನಿರ್ಣಯದೊಂದಿಗೆ ಮುಂದೆ ಸಾಗಲು ನಾನು ನಿಮ್ಮೆಲ್ಲರನ್ನು ಒತ್ತಾಯಿಸುತ್ತೇನೆ.

3. ಕಳೆದ ಒಂದು ವರ್ಷದ ಅವಧಿಯಲ್ಲಿ ಹಲವಾರು ಅಡ್ಡಿ ಆತಂಕಗಳನ್ನು ನಾವು ಯಶಸ್ವಿಯಾಗಿ ದಾಟಿ ಮುಂದೆ ಬಂದಿದ್ದೇವೆ. ಮುನ್ನೋಟ 2020ರ ಮೂಲಕ ನಾವು ನಿರ್ಮಿಸುತ್ತಿರುವ ಆಧುನಿಕ ಕರ್ನಾಟಕದ ಅಭಿವೃದ್ಧಿಯ ಗತಿ ವರ್ಧಿಸಲು ನಾವು ಗಂಭೀರ ಪ್ರಯತ್ನಗಳನ್ನು ಮಾಡಿದ್ದೇವೆ. ನನ್ನ ಸರ್ಕಾರವು ಕಳೆದ ಒಂದು ವರ್ಷದ ಅವಧಿಯಲ್ಲಿ ಆಡಳಿತ, ಅಭಿವೃದ್ಧಿ ಮತ್ತು ಜನಸ್ನೇಹಪರ

ಯೋಜನೆಗಳು ಈ ಎರಡೂ ನಿಟ್ಟಿನಲ್ಲಿ ಬಿರುಸಿನ ಹೆಜ್ಜೆ ಹಾಕುತ್ತಿದೆ ಎಂಬ ವಿಚಾರವನ್ನು ನಿಮ್ಮಲ್ಲಿ ಹಂಚಿಕೊಳ್ಳಲು ನನಗೆ ಸಂತೋಷವೆನಿಸುತ್ತಿದೆ.

4. ರಾಜಕೀಯ ನಾಯಕತ್ವದಲ್ಲಿ ಬದಲಾವಣೆ ಆಗಿದ್ದರೂ ಸಹ, ಸರ್ಕಾರವು ಪೂರ್ಣ ಅಭಿವೃದ್ಧಿ ಕಾರ್ಯಕ್ರಮವನ್ನು ಬೆಂಬಿಡದೆ ಮುಂದುವರಿಸುತ್ತಿದೆ ಮತ್ತು ಸುಗಮ ಪರಿವರ್ತನೆ ಮತ್ತು ನಿರಂತರತೆ ಖಾತರಿಪಡಿಸಿದ್ದಕ್ಕೆ ನಾನು ಹೊಸ ಮುಖ್ಯಮಂತ್ರಿಯನ್ನು ಮತ್ತು ಅವರ ಸಂಪುಟ ಸಚಿವರನ್ನು ಅಭಿನಂದಿಸುತ್ತೇನೆ. ಅಲ್ಲದೆ, ಡಿಸೆಂಬರ್ 2011ರಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸುಗಮ ಚರ್ಚೆಗಳನ್ನು ನಡೆಸಿದ್ದಕ್ಕಾಗಿ ಆಡಳಿತ ಮತ್ತು ವಿರೋಧ ಪಕ್ಷಗಳೆರಡನ್ನು ಶ್ಲಾಘಿಸುತ್ತೇನೆ.

5. ಇತ್ತೀಚಿನ ವಿಧಾನಮಂಡಲ ಅಧಿವೇಶನದಲ್ಲಿ ನಾಗರಿಕರಿಗೆ ಸೇವಾ ಖಾತರಿ, ಭೂಕಬಳಿಕೆ ನಿಷೇಧಗೊಳಿಸುವಿಕೆ, ಕಲ್ಲು ಕ್ರಷರ್‌ಗಳನ್ನು ವಿನಿಯಮಗೊಳಿಸುವುದು, ಸಮುದ್ರ ವಿಷಯಕ ಮಂಡಳಿ ಸ್ಥಾಪನೆ ಮುಂತಾದ ವಿವಿಧ ವಿಧೇಯಕಗಳನ್ನು ಅಂಗೀಕರಿಸಲಾಯಿತು.

6. ನಾಗರಿಕ ಸೇವಾ ಹಕ್ಕು ಅಧಿನಿಯಮವನ್ನು ಅವಿರೋಧವಾಗಿ ಅನುಮೋದಿಸಿದ್ದಕ್ಕೆ ನಾನು ಮುಖ್ಯಮಂತ್ರಿಯವರನ್ನು ಮತ್ತು ಇಡೀ ವಿಧಾನಮಂಡಲವನ್ನು ನಿರ್ದಿಷ್ಟವಾಗಿ ಅಭಿನಂದಿಸಲು ಇಚ್ಛಿಸುತ್ತೇನೆ. ಉತ್ತಮ ಆಡಳಿತ ಮತ್ತು ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಗೆ ಅನುವು ಮಾಡಲು ಇದೊಂದು ಪ್ರಮುಖ ಶಾಸನವಾಗಿದೆ. ನಾಗರಿಕರಿಗೆ ಸಕಾಲದಲ್ಲಿ ಸೇವೆ ಒದಗಿಸುವುದನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಕಾನೂನು ಚೌಕಟ್ಟು ತುಂಬ ಪರಿಣಾಮಕಾರಿಯಾಗಿರುತ್ತದೆ ಎಂಬ ಭರವಸೆ ನನಗಿದೆ.

7. ಕರ್ನಾಟಕವು ಮತ್ತೊಮ್ಮೆ ಶಾಂತಿಯುವ ವರ್ಷವನ್ನು ಕಂಡಿದೆ. ಕಾನೂನು ಮತ್ತು ಸುವ್ಯವಸ್ಥೆ ಸ್ಥಿತಿ ಬಹಳ ಉತ್ತಮವಾಗಿದೆ ಮತ್ತು ರಾಜ್ಯದಲ್ಲಿ ಯಾವುದೇ ಕೋಮು ಗಲಭೆಗಳು ಘಟಿಸಿಲ್ಲ. ಶಾಂತಿ ಕಾಪಾಡುವಲ್ಲಿ ಮತ್ತು ನಕ್ಸಲ್ ಹಾವಳಿ ನಿಯಂತ್ರಿಸುವಲ್ಲಿ ನಮ್ಮ ಪೊಲೀಸ್ ದಳವು ಅತ್ಯುತ್ತಮ ಕೆಲಸ ಮಾಡಿದೆ.

8. 2011ರ ಮುಂಗಾರಿನಲ್ಲಿ ದುರದೃಷ್ಟವಶಾತ್ ಕರ್ನಾಟಕದಲ್ಲಿ ಸಾಕಾಗುವಷ್ಟು ಮಳೆ ಆಗಲಿಲ್ಲ. 2011ರ ಸೆಪ್ಟೆಂಬರ್‌ನಲ್ಲಿ ರಾಜ್ಯವು ಬರ ಪರಿಸ್ಥಿತಿಯನ್ನು ಎದುರಿಸಿತು. ಅತ್ಯಂತ ಹೆಚ್ಚಿನ ಕೊರತೆ (ಸೆಪ್ಟೆಂಬರ್ ತಿಂಗಳಲ್ಲಿ ಶೇ. 24ರಷ್ಟು ಮಳೆ) ಕಳೆದ 40 ವರ್ಷಗಳಲ್ಲಿಯೇ ಅತ್ಯಂತ ಕೆಟ್ಟ ಪರಿಸ್ಥಿತಿಯಾಗಿತ್ತು. ಇದರ ಪರಿಣಾಮವಾಗಿ ಹೆಚ್ಚಿನ ಪ್ರಮಾಣದ ಜಮೀನುಗಳಲ್ಲಿ ಬೆಳೆ ಇಳುವರಿ ಮಟ್ಟಗಳು ಕಡಿಮೆಯಾದವು. ಆದಾಗ್ಯೂ ರಾಜ್ಯವು ತಕ್ಷಣವೇ ಈ ಸನ್ನಿವೇಶಗಳಿಗೆ ಸ್ಪಂದಿಸಿತು ಮತ್ತು 23 ಜಿಲ್ಲೆಗಳ 99 ತಾಲ್ಲೂಕುಗಳನ್ನು “ಬರಪೀಡಿತ” ಪ್ರದೇಶಗಳೆಂದು ಘೋಷಿಸಿತು ಮತ್ತು ತತ್‌ಕ್ಷಣದ ಕ್ರಮ ತೆಗೆದುಕೊಂಡಿತು. ಅಲ್ಲದೆ ರಾಜ್ಯವು 723 ಕೋಟಿ ರೂಪಾಯಿಗಳ ಕೇಂದ್ರ ನೆರವನ್ನು ಕೋರಿ ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸಿತು.

**ಉತ್ತಮ ಹಣಕಾಸು ಸ್ಥಿತಿ**

9. ನನ್ನ ಸರ್ಕಾರದ ಹಣಕಾಸು ಸ್ಥಿತಿ ಬಹಳ ಉತ್ತಮವಾಗಿದೆ ಎಂಬುದನ್ನು ತಿಳಿಸಲು ನನಗೆ ಹರ್ಷವೆನಿಸುತ್ತದೆ. ಜಾಗತಿಕ ಆರ್ಥಿಕ ಹಿಂಜರಿಕೆ ಮತ್ತು ಪ್ರಚಲಿತ ವರ್ಷದಲ್ಲಿ ಒಟ್ಟಾರೆಯಾಗಿ ದೇಶದ ಬೆಳವಣಿಗೆ ಕುಂಠಿತವಾಗಿ ರಾಜ್ಯದ ಆರ್ಥಿಕತೆಗೆ ಸವಾಲುಗಳನ್ನು ಒಡ್ಡಿವೆ.

10. ಇಂಥ ಒಂದು ಪರಿಸ್ಥಿತಿಯಲ್ಲಿಯೂ ಸಹ ಕರ್ನಾಟಕ ರಾಜ್ಯವು ಈ ಸಾಲಿನಲ್ಲಿ ಯೋಜನಾ ವೆಚ್ಚದಲ್ಲಿ ಶೇ. 15ರಷ್ಟು ಬೆಳವಣಿಗೆ ಸಹಿತವಾಗಿ ಶೇಕಡಾ 20ಕ್ಕಿಂತಲೂ ಹೆಚ್ಚಿನ ಒಂದು ಅತಿ ಆರೋಗ್ಯಕರ ತೆರಿಗೆ ಆದಾಯ ಬೆಳೆವಣಿಗೆಯನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಅಲ್ಲದೆ ರಾಜ್ಯವು ಕಳೆದ ನಾಲ್ಕು ವರ್ಷಗಳಿಂದ ನಿರಂತರವಾಗಿ ವರಮಾನ ಹೆಚ್ಚುವರಿಯನ್ನು ಕಾಪಾಡಿಕೊಂಡು ಬಂದಿದೆ. ರಾಜ್ಯದ ಸಾಲಗಳು ಅನುಮೋದಿತ ವಿತ್ತೀಯ ವಿವೇಕಯುತ ಮಾನದಂಡಗಳ ಮಿತಿಯೊಳಗಿವೆ. 2011–12ಕ್ಕೆ ಅನುಮೋದಿತ ಯೋಜನಾ ಗಾತ್ರವನ್ನು ಪೂರ್ಣ ಪ್ರಮಾಣದಲ್ಲಿ ಸಾಧಿಸಲು ವಿಶ್ವಾಸವನ್ನು ನನ್ನ ಸರ್ಕಾರ ಹೊಂದಿದೆ.

**ಕೃಷಿ ವಲಯ**

11. ರಾಜ್ಯವು ಮೊತ್ತಮೊದಲ ಬಾರಿಗೆ ಕೃಷಿ ಮತ್ತು ಸಂಬಂಧಿಸಿದ ವಲಯಗಳಲ್ಲಿ ಹೆಚ್ಚು ಬಂಡವಾಳ ಹೂಡಿಕೆಗಳನ್ನು ಪ್ರವರ್ತಿಸುವ ಉದ್ದೇಶದೊಂದಿಗೆ ಒಂದು ಕೃಷಿ ವ್ಯಾಪಾರನೀತಿಯನ್ನು ಜಾರಿಗೊಳಿಸಿತ್ತು. ಕಳೆದ ವರ್ಷದ ನನ್ನ ಜಂಟಿ ಅಧಿವೇಶನ ಭಾಷಣದಲ್ಲಿ ಆಶ್ವಾಸನೆ ನೀಡಿದಂತೆ ಭಾರತದಲ್ಲಿಯೇ ಪ್ರಥಮ ಬಾರಿಗೆ ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಬೆಂಗಳೂರಿನಲ್ಲಿ ಡಿಸೆಂಬರ್ 1 ಮತ್ತು 2, 2011ರಂದು ನಡೆಸಲಾಯಿತು ಎಂಬುದನ್ನು ತಮಗೆ ತಿಳಿಸಲು ನನಗೆ ಹರ್ಷವೆನಿಸುತ್ತಿದೆ. ಈ ಸಮಾವೇಶದಲ್ಲಿ ವಿವಿಧ ಹೂಡಿಕೆದಾರರೊಂದಿಗೆ 60,000 ಕೋಟಿ ರೂಪಾಯಿಗಳ ಮೌಲ್ಯದ ಒಪ್ಪಂದಪತ್ರಗಳಿಗೆ ಸಹಿ ಹಾಕಲಾಯಿತು. ಇದರ ಜೊತೆಗೆ ಬ್ಯಾಂಕುಗಳೊಂದಿಗೆ 50,000 ಕೋಟಿ ರೂಪಾಯಿಗಳ ಸಾಲ ಸೌಲಭ್ಯಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಕೃಷಿ ಕ್ಷೇತ್ರದಲ್ಲಿನ ಇಂಥ ಬೃಹತ್ ಹೂಡಿಕೆಯು, ಬೇಸಾಯ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ವಲಯಗಳ ವೃದ್ಧಿಗೆ ಉತ್ತಮ ಮೂಲಸೌಲಭ್ಯ ಮತ್ತು ಸಾಗಣೆ

ಸೌಲಭ್ಯ ವರ್ಧಿಸಲು ಅವಕಾಶ ಮಾಡಿಕೊಡುತ್ತದೆ. ಅಲ್ಲದೆ, ಕರ್ನಾಟಕವು ಹಿಂದಿನ ವರ್ಷದ ಆಯವ್ಯಯ ಹಂಚಿಕೆಗಿಂತ ಶೇ. 52ರಷ್ಟು ಏರಿಕೆಯೊಂದಿಗೆ ಬೇಸಾಯ ಮತ್ತು ಸಂಬಂಧಪಟ್ಟ ವಲಯಗಳಿಗೆ ಒಂದು ಪ್ರತ್ಯೇಕ ಆಯವ್ಯಯ ಜಾರಿಗೆ ತಂದ, ದೇಶದಲ್ಲಿನ ಮೊತ್ತಮೊದಲ ರಾಜ್ಯವೂ ಆಗಿದೆ. ಲಕ್ಷಾಂತರ ಬೇಸಾಯಗಾರರಿಗೆ ಅನುಕೂಲ ಉಂಟುಮಾಡುವ ಉದ್ದೇಶದೊಂದಿಗೆ ವರ್ಷದಲ್ಲಿ ಹಲವಾರು ಹೊಸ ಯೋಜನೆಗಳನ್ನು ಜಾರಿಗೊಳಿಸಲಾಯಿತು.

12. ಕರ್ನಾಟಕದಲ್ಲಿ ಕೃಷಿಗೆ ಅನುಕೂಲಕರವಾದ ವಾತಾವರಣ ಇರುವ ಹಿನ್ನೆಲೆಯಲ್ಲಿ, ತೋಟಗಾರಿಕೆಗೆ ವಿಶೇಷ ಒತ್ತನ್ನು ನೀಡಲಾಗಿದೆ. ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆ ಅಡಿಯೊಂದರಲ್ಲಿಯೇ 125 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ. ಇದರಿಂದ ತೋಟಗಾರಿಕೆ ಬೆಳೆಗಳ ವ್ಯಾಪ್ತಿಗೆ 18,400 ಹೆಕ್ಟೇರ್‌ನಷ್ಟು ಹೆಚ್ಚುವರಿ ಪ್ರದೇಶವನ್ನು ಸೃಜಿಸಿದಂತಾಗುತ್ತದೆ. 2800 ಹೆಕ್ಟೇರ್‌ನಷ್ಟು ತೋಟಗಾರಿಕೆ ಪ್ರದೇಶಕ್ಕೆ ಪುನಃಶ್ಚೇತನ ನೀಡಿದಂತಾಗುತ್ತದೆ ಮತ್ತು 320 ಹೆಕ್ಟೇರ್‌ಗಳಷ್ಟು ಪ್ರದೇಶ ರಕ್ಷಿತ ಬೇಸಾಯದ ಅಡಿಯಲ್ಲಿ ಬಂದಂತಾಗುತ್ತದೆ. ಹೂವಿನ ಬೆಳೆಗಳನ್ನು ಮತ್ತು ಗರ್ಕಿನ್‌ಗಳನ್ನು (ಕಿರು ಸೌತೆಕಾಯಿ) ರಫ್ತು ಮಾಡುವುದರಲ್ಲಿ ಕರ್ನಾಟಕವು ಮೊದಲ ಸ್ಥಾನದಲ್ಲಿದೆ.

## ನೀರಾವರಿ ವಲಯ

13. ನನ್ನ ಸರ್ಕಾರವು 2011–2020ರ ಅವಧಿಯನ್ನು ನೀರಾವರಿ ದಶಕವೆಂದು ಘೋಷಿಸಿದೆ. ಕೃಷ್ಣಾ ನ್ಯಾಯಾಧಿಕರಣ ಐತೀರ್ಪು–II ರ ತರುವಾಯ, ಸರ್ಕಾರವು ಕೃಷ್ಣಾನದಿ ನೀರನ್ನು ಬಳಕೆ ಮಾಡಿಕೊಳ್ಳಲು ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಕೈಗೊಳ್ಳಲು ತೀರ್ಮಾನಿಸಿದೆ ಮತ್ತು 17,000 ಕೋಟಿ ರೂಪಾಯಿಗಳ ಒಟ್ಟು ಯೋಜನಾ ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ.

14. ಈ ವರ್ಷದ ಅವಧಿಯಲ್ಲಿ, 57,000 ಹೆಕ್ಟೇರ್ ಭೂಮಿಗೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗುವುದು. ಪ್ರಸಕ್ತ ವರ್ಷದಲ್ಲಿ, 1.12 ಲಕ್ಷ ಹೆಕ್ಟೇರ್‌ನಷ್ಟು ಜಲಭರಿತವಾದ, ಲವಣ ಮತ್ತು ಕ್ಷಾರಬಾಧಿತವಾದ ಪ್ರದೇಶಗಳನ್ನು ಕೃಷಿ ಯೋಗ್ಯಗೊಳಿಸಲಾಗಿದೆ. ಹಾಲಿ ಇರುವ ಇತರ ಸಂಸ್ಥೆಗಳನ್ನು ಪುನರ್‌ಸಂಘಟಿಸುವ ಮತ್ತು ಪುನರ್‌ರಚಿಸುವ ಮೂಲಕ ಸಮಗ್ರ ಜಲಸಂಪನ್ಮೂಲ ನಿರ್ವಹಣೆ (ಐಡಬ್ಲ್ಯೂಆರ್‌ಎಂ) ಉತ್ಕೃಷ್ಟತೆ ಕೇಂದ್ರವನ್ನು ಸ್ಥಾಪಿಸಲಾಗುವುದು. ಈ ಉತ್ಕೃಷ್ಟತೆ ಕೇಂದ್ರವು ಐಡಬ್ಲ್ಯೂಆರ್‌ಎಂ ತತ್ವಗಳನ್ನು ರೂಪಿಸುವಲ್ಲಿ ನೆರವಾಗಲಿದ್ದು. ಇದರಿಂದ ರಾಜ್ಯದಲ್ಲಿನ ರೈತರಿಗೆ ಪ್ರಯೋಜನವಾಗಲಿದೆ.

15. ರಾಜ್ಯಾದ್ಯಂತ ಇರುವ ಸಾಂಪ್ರದಾಯಿಕ ಕೆರೆಗಳನ್ನು ಸಂರಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಸಣ್ಣ ನೀರಾವರಿ ಇಲಾಖೆಯು, 13ನೇ ಹಣಕಾಸು ಆಯೋಗದ ಅನುದಾನಗಳ ಬೆಂಬಲದಿಂದ 631 ಕೆರೆಗಳ ಬಗ್ಗೆ ತನ್ನು ಗಮನವನ್ನು ಕೇಂದ್ರೀಕರಿಸಿದೆ. ಅನುಸೂಚಿತ ಜಾತಿಗಳ/ ಅನುಸೂಚಿತ ಬುಡಕಟ್ಟುಗಳ ರೈತರ ಪ್ರಯೋಜನಕ್ಕಾಗಿ ನನ್ನ ಸರ್ಕಾರವು ಹಲವಾರು ಏತ ನೀರಾವರಿ ವ್ಯವಸ್ಥೆಗಳನ್ನು ಸಹ ಪ್ರಾರಂಭಿಸಿದೆ.

16. ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ಮತ್ತು ಅದರ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು, ಅದರ ಬಳಕೆಯ ಮೇಲೆ ಪರಿಣಾಮಕಾರಿಯಾದ ಮೇಲ್ವಿಚಾರಣೆ ಮಾಡಲು, ರಾಜ್ಯವು ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮ ಮತ್ತು ನಿಯಂತ್ರಣ) ಅಧಿನಿಯಮ, 2011ನ್ನು ಜಾರಿಗೊಳಿಸಿದೆ.

## ಸಹಕಾರ ವಲಯ

17. ಸಹಕಾರಿ ಸಂಸ್ಥೆಗಳ ಮೂಲಕ ಶೇ. 4ರಷ್ಟು ಕಡಿಮೆ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸುವ ಮೂಲಕ ಸ್ವಸಹಾಯ ಗುಂಪುಗಳಿಗೆ ಬೆಂಬಲ ನೀಡುವುದನ್ನು ನನ್ನ ಸರ್ಕಾರವು ಮುಂದುವರಿಸಿದೆ. ಪ್ರಸ್ತುತ 12,562 ಮಹಿಳಾ ಗುಂಪುಗಳು ರಾಜ್ಯದಲ್ಲಿ ಕಾರ್ಯಪ್ರವೃತ್ತವಾಗಿವೆ. ಅವು ಒಟ್ಟಾಗಿ 384 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಿದೆ ಮತ್ತು 2011ರ ನವೆಂಬರ್ ಅಂತ್ಯದವರೆಗೆ ಅಬುಗಳಿಗೆ 228 ಕೋಟಿ ರೂಪಾಯಿಗಳ ಮುಂಗಡ ನೀಡಲಾಗಿದೆ. ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ಪಾಲನೆ ಯೋಜನೆ ಅಡಿಯಲ್ಲಿ ಸುಮಾರು 33 ಲಕ್ಷ ಸದಸ್ಯರು ಒಳಗೊಂಡಿದ್ದಾರೆ.

## ಅರಣ್ಯ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ

18. "ಪರಿಸರ ಸ್ಥಿತಿಗತಿ ವರದಿ, 2011"ರ ಕರಡನ್ನು ತಯಾರಿಸಿ ಸಾರ್ವಜನಿಕರ ಅಭಿಪ್ರಾಯಗಳಿಗಾಗಿ ಇಡಲಾಗಿದೆ. ಪರಿಸರ ಸಂಬಂಧಿ ವಿಷಯಗಳ ಬಗ್ಗೆ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸಲು, ನಮ್ಮ ರಾಜ್ಯದ ವಿವಿಧ ಪ್ರೌಢ ಶಾಲೆಗಳಲ್ಲಿ 7432 ಪರಿಸರ ಕ್ಲಬ್‌ಗಳನ್ನು ರಚಿಸಲಾಗಿದೆ. ರಾಜ್ಯ ಜೈವಿಕ ವೈವಿಧ್ಯತಾ ಮಂಡಳಿಯು 214 ಜನರ ಜೈವಿಕ ವೈವಿಧ್ಯತೆ ರಿಜಿಸ್ಟರುಗಳನ್ನು ಪ್ರಕಟಿಸಿದೆ.

19. 2011–12ರಲ್ಲಿ, 65,000 ಹೆಕ್ಟೇರು ಪ್ರದೇಶದಲ್ಲಿ 6 ಕೋಟಿ ಸಸಿಗಳನ್ನು ನೆಡಲಾಗಿದೆ ಮತ್ತು 1.5 ಕೋಟಿ ಸಸಿಗಳನ್ನು ರೈತರಿಗೆ ಮತ್ತು ಸಾರ್ವಜನಿಕರಿಗೆ ವಿತರಿಸಲಾಗಿದೆ. ದೈವಿ ವನ ಸಸ್ಯಪಾಲನ ಕ್ಷೇತ್ರಗಳನ್ನು ಸ್ಥಾಪಿಸಲಾಗುತ್ತಿದ್ದು, ಧಾರ್ಮಿಕ ಪ್ರಾಮುಖ್ಯತೆಯ, ಅವಸಾನದ ಅಂಚಿನಲ್ಲಿರುವ ತಳಿಗಳ ಮತ್ತು ಸ್ಥಳೀಯ ಹೂ ಮತ್ತು ಹಣ್ಣು ಬಿಡುವ ಗಿಡಗಳ ಸಸಿಗಳನ್ನು ಸ್ಥಳೀಯ ಜನರಿಗೆ

ವಿತರಿಸಲಾಗುವುದು. ಕರ್ನಾಟಕವು 300 ಹುಲಿಗಳನ್ನು ಹೊಂದಿದ್ದು, ಹುಲಿಗಳ ಸಂಖ್ಯೆಯಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ ಎಂಬುದನ್ನು ತಿಳಿಸಲು ನನಗೆ ಸಂತೋಷವೆನಿಸುತ್ತದೆ.

**ಗ್ರಾಮೀಣ ಅಭಿವೃದ್ಧಿ**

20. ರಾಜ್ಯ ಸರ್ಕಾರವು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಹೆಚ್ಚಿನ ಆದ್ಯತೆಯನ್ನು ನೀಡಿದೆ. ಡಿಸೆಂಬರ್ 2011ರವರೆಗೆ, 54 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಉದ್ಯೋಗ ಚೀಟಿಗಳನ್ನು ನೀಡಲಾಗಿದೆ ಮತ್ತು 200 ಲಕ್ಷ ಮಾನವ ಉದ್ಯೋಗ ದಿನಗಳು ಸೃಜನೆಯಾಗಿವೆ.

21. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಅಡಿಯಲ್ಲಿ ರಾಜ್ಯದಾದ್ಯಂತ 1,091 ಕಿ.ಮೀ. ರಸ್ತೆಗಳನ್ನು ನಿರ್ಮಿಸಲಾಗಿದೆ. 2000ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಜನವಸತಿ ಪ್ರದೇಶಗಳಿಗೆ ಸರ್ವಋತು ಗ್ರಾಮೀಣ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ಪಿ.ಎಂ.ಜಿ.ಎಸ್.ವೈ. ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಭಾರತದಲ್ಲಿ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ ಎಂಬುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ. ಗ್ರಾಮ ಪಂಚಾಯತಿಗಳ ಸೇವಾ ನೀಡಿಕೆಯ ವ್ಯವಸ್ಥೆಯನ್ನು ಸುಧಾರಿಸಲು, ಅದರಲ್ಲೂ ವಿಶೇಷವಾಗಿ, ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆಗೆ ಮತ್ತು ಸ್ಥಳೀಯ ಜನರು ಆದ್ಯತೆ ನೀಡಬಹುದಾದ ಮತ್ತು ನಿರ್ಧರಿಸಬಹುದಾದಂಥ ಸೇವೆಗಳನ್ನು ಒದಗಿಸುವುದಕ್ಕೆ ಸಂಬಂಧಪಟ್ಟಂತೆ ಗ್ರಾಮಸ್ವರಾಜ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಬಡವರಿಗಾಗಿ ವಸತಿ**

22. ಪ್ರಸಕ್ತ ವರ್ಷದಲ್ಲಿ, ರಾಜ್ಯದಾದ್ಯಂತ ಸುಮಾರು 52,000 ಮನೆಗಳನ್ನು ನಿರ್ಮಿಸಲಾಗಿದೆ.

23. ಕೊಳಗೇರಿಗಳಲ್ಲಿ ಮೂಲಭೂತ ಸೌಕರ್ಯಗಳುಳ್ಳ ಮನೆಗಳ ನಿರ್ಮಾಣವು ಈ ವರ್ಷ ಗಣನೀಯವಾಗಿ ಸುಧಾರಣೆಗೊಂಡಿದೆ. ಬೆಂಗಳೂರಿನಲ್ಲಿ, 58 ಕೊಳಗೇರಿಗಳಲ್ಲಿ 18,180 ಮನೆಗಳ ನಿರ್ಮಾಣ ಕಾಮಗಾರಿ ಮತ್ತು ಮೈಸೂರಿನಲ್ಲಿ, 67 ಕೊಳಗೇರಿಗಳಲ್ಲಿ 8,522 ಮನೆಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ. ಸಮಗ್ರ ವಸತಿ ಮತ್ತು ಕೊಳಗೇರಿ ಪ್ರದೇಶಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ, ಮೂಲಭೂತ ಸೌಕರ್ಯಗಳುಳ್ಳ 17,237 ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ನಗರದ ಬಡಜನರಿಗೆ ಮೂಲಭೂತ ಸೇವೆಗಳನ್ನು ಕಲ್ಪಿಸುವ ಯೋಜನೆಯಡಿ, ಬೆಂಗಳೂರು ಮತ್ತು ಮೈಸೂರು ನಗರಗಳ ಕೊಳಗೇರಿಗಳಲ್ಲಿ ಮೂಲಭೂತ ಸೌಕರ್ಯಗಳುಳ್ಳ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಸಾರ್ವಜನಿಕ ಆರೋಗ್ಯದಲ್ಲಿ ಸುಧಾರಣೆ**

24. ನನ್ನ ಸರ್ಕಾರದ ದೃಢ ಪ್ರಯತ್ನಗಳಿಂದಾಗಿ ಆರೋಗ್ಯ ಸೂಚಕಗಳು ಗಣನೀಯವಾಗಿ ಸುಧಾರಣೆಗೊಂಡಿವೆ; ಶಿಶು ಮರಣದ ಪ್ರಮಾಣವು 45ರಿಂದ 39ಕ್ಕೆ ಇಳಿದಿದೆ; ತಾಯಂದಿರ ಮರಣದ ಪ್ರಮಾಣವು 228 ರಿಂದ 178 ಕ್ಕೆ ಇಳಿದಿದೆ; ಒಟ್ಟು ಸಂತಾನಶೀಲತೆ ಪ್ರಮಾಣವು 2.07 ರಿಂದ 2.0ಕ್ಕೆ ಇಳಿದಿದ್ದು, ಇದು 2012ನೇ ವರ್ಷದ ವೇಳೆಗೆ ಭಾರತ ಸರ್ಕಾರ ನಿಗದಿಪಡಿಸಿದ 2.1 ಪ್ರಮಾಣಕ್ಕಿಂತ ಕಡಿಮೆಯಿರುತ್ತದೆ; ಸಾಂಸ್ಥಿಕ ಹೆರಿಗೆಗಳು ಸಹ ಶೇ. 65 ರಿಂದ ಶೇ. 93ಕ್ಕೆ ಸುಧಾರಣೆಗೊಂಡಿವೆ.

25. ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ಲಭ್ಯತೆಯನ್ನು ಖಚಿತಪಡಿಸಲು ಮತ್ತು ವರ್ಗಾವಣೆಗಳನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ನಾಗರಿಕ ಸೇವಾ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011 ಅನ್ನು ಅಧಿನಿಯಮಿಸಲಾಗಿದೆ.

26. ಡಿಸೆಂಬರ್ 2011ರವರೆಗೆ, ಆರೋಗ್ಯ ಕವಚ ಯೋಜನೆಯ ವ್ಯಾಪ್ತಿಗೆ 4.40 ಲಕ್ಷ ಜನರನ್ನು ಮತ್ತು ವಾಜಪೇಯಿ ಆರೋಗ್ಯಶ್ರೀ ಯೋಜನೆಯ ವ್ಯಾಪ್ತಿಗೆ 19,000 ಜನರನ್ನು ಒಳಪಡಿಸಲಾಗಿದೆ.

27. ಎಲ್ಲಾ ವೈದ್ಯಕೀಯ ಕಾಲೇಜುಗಳು ಮತ್ತು ಬೋಧಕ ಸಂಸ್ಥೆಗಳು ಹಾಗೂ ಅವುಗಳಿಗೆ ಹೊಂದಿಕೊಂಡಿರುವ ಆಸ್ಪತ್ರೆಗಳಿಗೆ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲಾಗುತ್ತಿದೆ. ಬೆಳಗಾವಿಯಲ್ಲಿ ಟ್ರೌಮಾ ಕೇರ್ ಸೆಂಟರ್ ಅನ್ನು ಸ್ಥಾಪಿಸಲಾಗಿದೆ.

**ಸಮಾಜ ಕಲ್ಯಾಣ**

28. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ಉತ್ತಮಪಡಿಸಲು 2011–12ನೇ ಸಾಲಿನ ಆಯವ್ಯಯ ಹಂಚಿಕೆಯನ್ನು ಶೇ.24ರಷ್ಟು (ಅಂದರೆ 2377 ಕೋಟಿ ರೂ.) ಹೆಚ್ಚಿಸಲಾಗಿದೆ. ಸೂಕ್ತ ಮೂಲಸೌಲಭ್ಯಗಳೊಂದಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ. ಈ ವರ್ಷದ ಅವಧಿಯಲ್ಲಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನವನ್ನು ಮಾಸಿಕ ರೂ. 75 ರಿಂದ ರೂ. 250ಕ್ಕೆ ಪರಿಷ್ಕರಿಸಲಾಗಿದೆ.

29. ಡಾ॥ ಅಂಬೇಡ್ಕರ್ ಭವನ, ಡಾ॥ ಜಗಜೀವನರಾಂ ಭವನ, ಮಹರ್ಷಿ ವಾಲ್ಮೀಕಿ ಭವನ ಮತ್ತು ಇತರ ಸಮುದಾಯ ಭವನಗಳ ನಿರ್ಮಾಣವನ್ನು ಕೈಗೊಳ್ಳಲಾಗುತ್ತಿದೆ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಸೇರಿದ ಸಣ್ಣ ಮತ್ತು ಮಧ್ಯಮ ಉದ್ಯಮಶೀಲರಿಗೆ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಶೇ.4ರ ಬಡ್ಡಿ ದರದಲ್ಲಿ 2 ಕೋಟಿ ರೂ.ವರೆಗೂ ಸಾಲ/ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಹಿಂದುಳಿದ ವರ್ಗಗಳಿಗೆ ಸೇರಿದ ಬೇರೆ ಬೇರೆ ಸಮುದಾಯದವರ 61 ಸಮುದಾಯ ಭವನಗಳು/ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ ನೀಡಲಾಗಿದೆ. ಗಂಗಾ ಕಲ್ಯಾಣ ಯೋಜನೆ ಅಡಿ 3,362 ಕೋಳವೆಬಾವಿಗಳನ್ನು ವಿದ್ಯುದ್ಧೀಕರಣಗೊಳಿಸಲಾಗಿದೆ.

30. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ, 2011–12ನೇ ಸಾಲಿನಲ್ಲಿ ಸುಮಾರು 20,000 ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಂಡಿದ್ದಾರೆ. ಅಲ್ಪಸಂಖ್ಯಾತ ಸಮುದಾಯಗಳು ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಅನುಕೂಲ ಮಾಡಿಕೊಡಲು ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಮುದಾಯ ಭವನ ಅಥವಾ ಶಾದಿ ಮಹಲನ್ನು ನಿರ್ಮಿಸಲಾಗುತ್ತಿದೆ. ಪ್ರಥಮ ಬಾರಿಗೆ, ಕ್ರೈಸ್ತರ ಸಮುದಾಯ ಅಭಿವೃದ್ಧಿ ಕಾರ್ಯಗಳ ಅನುಕೂಲಕ್ಕಾಗಿ 50 ಕೋಟಿ ರೂ.ಗಳನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ.

31. ನನ್ನ ಸರ್ಕಾರವು, ವಕ್ಫ್ ಸ್ವತ್ತುಗಳನ್ನು ಒತ್ತುವರಿಗಳಿಂದ ಸಂರಕ್ಷಿಲು ವಿಶೇಷ ಕ್ರಮಗಳನ್ನು ಕೈಗೊಂಡಿದೆ. ರಾಜ್ಯದಾದ್ಯಂತ, 1200 ವಕ್ಫ್ ಸ್ವತ್ತುಗಳನ್ನು ಮೋಜಣಿ ಮಾಡಲಾಗಿದೆ ಮತ್ತು ಅವುಗಳ ಭೂ ದಾಖಲೆಗಳನ್ನು ಗಣಕೀಕರಣಗೊಳಿಸಲಾಗುತ್ತಿದೆ. 2011–12ನೇ ಸಾಲಿನಲ್ಲಿ 7,335 ಹಜ್ ಯಾತ್ರಿಕರಿಗೆ ನೆರವು ನೀಡಲಾಗಿದೆ.

ಬೆಂಗಳೂರಿನಲ್ಲಿ ಹಜ್ ಘರ್ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರವು 40 ಕೋಟಿ ರೂ. ಒದಗಿಸಿದೆ.

32. 2292 ಕೋಟಿ ರೂಪಾಯಿಗಳ ವೆಚ್ಚದಲ್ಲಿ, ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳ ಅಡಿ 35 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳನ್ನು ತರಲಾಗಿದೆ.

**ಮಹಿಳೆಯರ ಕಲ್ಯಾಣ**

33. ಭಾರತದಲ್ಲೇ ಪ್ರಪ್ರಥಮ ಬಾರಿಗೆ, ಕರ್ನಾಟಕದಲ್ಲಿ ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರಿಗಾಗಿ ಹೊಸ ಪಿಂಚಣಿ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಎಲ್ಲಾ ಜಿಲ್ಲೆಗಳಲ್ಲಿ ವಿಶೇಷ ಘಟಕ ಯೋಜನೆಯಡಿ ಮಾಜಿ ದೇವದಾಸಿಯರಿಗೆ ಪುನರ್ವಸತಿಯನ್ನು ಕಲ್ಪಿಸಲಾಗಿದೆ. ಬೀದಿ ವ್ಯಾಪಾರ ಮಾಡುವ ಮಹಿಳೆಯರಿಗೆ ಸಾಲ ಸೌಲಭ್ಯಗಳನ್ನು ಕಲ್ಪಿಸುವ ಯೋಜನೆಯನ್ನು ಕೆಲವು ನಗರಗಳಲ್ಲಿ ಪ್ರಾರಂಭಿಸಲಾಗಿದೆ.

**ಶಿಕ್ಷಣದಲ್ಲಿ ಸುಧಾರಣೆ**

34. ಕರ್ನಾಟಕವು ಶಿಕ್ಷಣ ವಲಯದಲ್ಲಿ ಕ್ಷಿಪ್ರಗತಿಯ ಮುನ್ನಡೆಯನ್ನು ಸಾಧಿಸಿದೆ. ಆಡಳಿತ ಸುಧಾರಣೆಗಳನ್ನು ತರಲು ಧಾರವಾಡದಲ್ಲಿ ಶಿಕ್ಷಣ ಯೋಜನೆ ಮತ್ತು ನಿರ್ವಹಣೆಯಲ್ಲಿ ಶಾಲಾ ನಾಯಕತ್ವ ಕುರಿತ ರಾಜ್ಯಮಟ್ಟದ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. 2011–12ನೇ ಸಾಲಿನಲ್ಲಿ, 9ನೇ ತರಗತಿಯನ್ನು ಪ್ರಾರಂಭಿಸುವುದರ ಮೂಲಕ 304 ಹಿರಿಯ ಪ್ರಾಥಮಿಕ ಶಾಲೆಗಳನ್ನು, ಪ್ರೌಢಶಾಲೆಗಳ ಮಟ್ಟಕ್ಕೆ ಮೇಲ್ದರ್ಜೆಗೇರಿಸಲಾಗಿದೆ.

35. 2011ನೇ ವರ್ಷದಲ್ಲಿ ಹತ್ತನೇ ತರಗತಿ ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚಿನ ಅಂಕಗಳನ್ನು ಗಳಿಸಿದ ಪ್ರತಿ ಜಿಲ್ಲೆಯ 3 ವಿದ್ಯಾರ್ಥಿಗಳಿಗೆ ಉಚಿತ ಕಂಪ್ಯೂಟರ್‌ಗಳನ್ನು ವಿತರಿಸಲಾಗಿದೆ.

36. ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. ಆಟದ ಮೈದಾನಗಳು, ಕುಡಿಯುವ ನೀರು, ವಿದ್ಯುಚ್ಛಕ್ತಿ ಮತ್ತು ಇತರೆ ಸೌಲಭ್ಯಗಳನ್ನು ಒಳಗೊಂಡ ಪಂಚ ಸೌಲಭ್ಯ ಯೋಜನೆ ಅಡಿ ಈ ಕಾರ್ಯಕ್ರಮಕ್ಕೆ 2011–12ನೇ ಸಾಲಿನಲ್ಲಿ ವಿಶೇಷ ಒತ್ತು ನೀಡಲಾಗಿದೆ.

37. ಕರ್ನಾಟಕವು ಜ್ಞಾನ ಕ್ಷೇತ್ರದಲ್ಲಿ ಉಪಕ್ರಮಗಳನ್ನು ಕೈಗೊಳ್ಳುವಲ್ಲಿ ಇತರ ರಾಜ್ಯಗಳಿಗಿಂತ ಬಹಳ ಮುಂದಿದೆ. ಡಾ॥ ಕಸ್ತೂರಿ ರಂಗನ್, ಸದಸ್ಯರು, ಯೋಜನಾ ಆಯೋಗ – ಇವರ ನೇತೃತ್ವದ ಕರ್ನಾಟಕ ಜ್ಞಾನ ಆಯೋಗವು ಕಳೆದ ಮೂರು ವರ್ಷಗಳಲ್ಲಿ ಹಲವಾರು ಶಿಫಾರಸ್ಸುಗಳನ್ನು ಮಾಡಿದೆ, ಸಂಶೋಧನಾ ಅಧ್ಯಯನಗಳನ್ನು ನಡೆಸಿದೆ ಮತ್ತು ಕೆಲವು ಯೋಜನೆಗಳನ್ನು ಪ್ರಾರಂಭಿಸಿದೆ. ಇದರ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾದ 'ಜ್ಞಾನ ಫೆಲೋ', ಸರ್ಕಾರ ಮತ್ತು ಯುವ ವೃತ್ತಿದಾರರ ನಡುವೆ ಸಂಪರ್ಕವನ್ನು ಹೆಚ್ಚಿಸುವ ಸಲುವಾಗಿ ಪ್ರಾರಂಭಿಸಲಾದ ಒಂದು ಅತ್ಯಂತ ನೂತನ ಯೋಜನೆಯಾಗಿದೆ. ಇಂದು, 8 ಸರ್ಕಾರಿ ಇಲಾಖೆಗಳು 19 ಜ್ಞಾನ ಫೆಲೋಗಳಿಗೆ ಯೋಜನೆಗಳನ್ನು ವಹಿಸಿಕೊಟ್ಟಿವೆ. ಕನ್ನಡ ಭಾಷೆಯನ್ನು ಮತ್ತು ಇತರ ಶಿಕ್ಷಣ ವಿಷಯಗಳ ಜ್ಞಾನವನ್ನು ಶ್ರೀಮಂತಗೊಳಿಸುವ ಉದ್ದೇಶಕ್ಕಾಗಿಯೇ ಸಮರ್ಪಿತವಾದ 'ಕಣಜ' ಎಂಬ ಇ–ಪೋರ್ಟಲ್ ಅನ್ನು ಪ್ರಾರಂಭಿಸಿರುವುದು ಮತ್ತೊಂದು ಮೈಲುಗಲ್ಲಾಗಿದೆ.

38. ಮೊದಲ ಬಾರಿಗೆ ಹಾವೇರಿ ಜಿಲ್ಲೆಯಲ್ಲಿ ಜಾನಪದ ವಿಶ್ವವಿದ್ಯಾನಿಲಯವನ್ನು ಮತ್ತು ಕುಶಾಲನಗರದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲಾಗಿದೆ. 74 ಸರ್ಕಾರಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ.

## ಬೆಂಗಳೂರು ಅಭಿವೃದ್ಧಿ

39. ಬಹು ನಿರೀಕ್ಷಿತ ನಮ್ಮ ಮೆಟ್ರೋ, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಅಕ್ಟೋಬರ್ 2 ರಂದು 7.5 ಕಿ.ಮೀ ಉದ್ದದ ತನ್ನ ಮೊದಲ ಮಾರ್ಗವನ್ನು ಪ್ರಾರಂಭಗೊಳಿಸಿದೆ. ಅದಕ್ಕೆ ಸಾರ್ವಜನಿಕರಿಂದ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರತಿದಿನ ಸರಿಸುಮಾರು 30,000 ಜನರು ಮೆಟ್ರೋ ಸಾರಿಗೆಯನ್ನು ಬಳಸುತ್ತಿದ್ದಾರೆ. ಪೀಣ್ಯದಿಂದ ಸಂಪಿಗೆ ರಸ್ತೆವರೆಗೆ 10 ನಿಲ್ದಾಣಗಳನ್ನು ಒಳಗೊಂಡ 11 ಕಿ.ಮೀ. ಉದ್ದದ ಉತ್ತರ ಕಾರಿಡಾರ್ ಡಿಸೆಂಬರ್ 2012ರ ಹೊತ್ತಿಗೆ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಲಿದೆ ಮತ್ತು ಇಡೀ ಹಂತ–1 ಡಿಸೆಂಬರ್ 2013ರ ಹೊತ್ತಿಗೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

40. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2280 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಗೊಳಿಸಿ ಅದಕ್ಕೆ ಡಾಂಬರು ಹಾಕಿದೆ ಮತ್ತು ಬೇರೆ 35 ಕಿ.ಮೀ. ರಸ್ತೆಗೆ ಕಾಂಕ್ರೀಟ್ ಹಾಕಲಾಗಿದೆ. ಇದರ ಜೊತೆಗೆ, 12 ಪಾದಚಾರಿ ಸುರಂಗ ಮಾರ್ಗಗಳನ್ನು ನಿರ್ಮಿಸಲಾಗಿದೆ ಮತ್ತು 656 ಉದ್ಯಾನವನಗಳನ್ನು ಅಭಿವೃದ್ಧಿ ಮಾಡಲಾಗಿದೆ.

41. ಸಂಚಾರವನ್ನು ಸುಗಮಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸುಮಾರು 36 ಕಿ.ಮೀ. ರಸ್ತೆಯನ್ನು ಸಿಗ್ನಲ್‌ಮುಕ್ತ ಕಾರಿಡಾರನ್ನಾಗಿ ಮಾಡಲು ಕೇಂದ್ರ ರೇಷ್ಮೆ ಮಂಡಳಿಯಿಂದ ಹೆಬ್ಬಾಳ ಮೇಲು ಸೇತುವೆವರೆಗೆ ಮತ್ತು ನಂತರ ತುಮಕೂರು ರಸ್ತೆ ಜಂಕ್ಷನ್‌ವರೆಗೂ ಹೊರವರ್ತುಲ ರಸ್ತೆಯಲ್ಲಿ 12 ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು

ಆರ್ಥಿಕವಾಗಿ ದುರ್ಬಲರಾಗಿರುವ ವರ್ಗಗಳ ಜನರಿಗಾಗಿ 14,000 ಮನೆಗಳನ್ನು ನಿರ್ಮಿಸಲು ಸಹ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

42. ನಗರದಾದ್ಯಂತ ಶತಮಾನದಷ್ಟು ಹಳೆಯ ಜಲಸಂಗ್ರಹಾಗಾರಗಳನ್ನು ಉಳಿಸಿಕೊಳ್ಳಲು ಮತ್ತು ಜೀರ್ಣೋದ್ಧಾರಗೊಳಿಸಲು 11 ಕೆರೆಗಳನ್ನು ಸಂಪೂರ್ಣವಾಗಿ ಜೀರ್ಣೋದ್ಧಾರಗೊಳಿಸಲಾಗಿದೆ ಮತ್ತು ಬೇರೆ 32 ಕೆರೆಗಳು ಈ ದಿಸೆಯಲ್ಲಿ ಪ್ರಗತಿಯಲ್ಲಿವೆ.

**ಇತರ ನಗರ ಪ್ರದೇಶಗಳು**

43. ದೇಶದಲ್ಲೇ ಮೊದಲ ಬಾರಿಗೆ, ಪ್ರಾಯೋಗಿಕ ಆಧಾರದ ಮೇಲೆ, 5 ನಗರಗಳಲ್ಲಿ, ಜಿಐಎಸ್ ನೆಲೆಯ ಮೇಲೆ ನಗರ ಆಸ್ತಿ ಮಾಲೀಕತ್ವ ದಾಖಲೆಗಳನ್ನು ಸೃಜಿಸಲಾಗುತ್ತಿದೆ. ಇದರಿಂದ ಆಸ್ತಿಯ ಮಾಲೀಕರು ತಮ್ಮ ಸ್ವತ್ತಿಗೆ ಸಂಬಂಧಿಸಿದಂತೆ ಜಿಯೊ ಉಲ್ಲೇಖದೊಂದಿಗೆ (Geo reference) ಅಧೀಕೃತ ದಾಖಲೆಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಇದನ್ನು ಹಂತಹಂತವಾಗಿ ಬೆಂಗಳೂರು ನಗರವೂ ಸೇರಿದಂತೆ ಇತರ ಎಲ್ಲ ನಗರಗಳಿಗೂ ವಿಸ್ತರಿಸಲಾಗುವುದು.

44. 164 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂಲ ಪೌರಾಡಳಿತ ಪ್ರಕಾರ್ಯಗಳನ್ನು ಗಣಕೀಕರಣಗೊಳಿಸಲು ಆದ್ಯತೆ ನೀಡಲಾಗಿದೆ. ಇದರ ಜೊತೆಗೆ, ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆಯನ್ನು ಗಣಕೀಕರಣಗೊಳಿಸುವ ಕಾರ್ಯವೂ ಪ್ರಗತಿಯಲ್ಲಿದೆ. ಉತ್ತಮ ಯೋಜನೆಯನ್ನು ರೂಪಿಸುವುದಕ್ಕಾಗಿ 27 ನಗರ ಪ್ರದೇಶಗಳಿಗೆ ನಕ್ಷೆ ಸಿದ್ಧಪಡಿಸುವುದಕ್ಕಾಗಿ ಉಪಗ್ರಹ ಚಿತ್ರವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. 211 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಖ್ಯಮಂತ್ರಿಯವರ ಸಣ್ಣ ಮತ್ತು ಮಧ್ಯಮ ನಗರ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

45. ರಾಜ್ಯದಾದ್ಯಂತ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಸೌಕರ್ಯ ಉತ್ತಮವಾಗಿ ಲಭಿಸುವಂತಾಗಲು, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಜೆ–ನರ್ಮ್ ಯೋಜನೆ ಅಡಿಯಲ್ಲಿ 45 ನೀರು ಸರಬರಾಜು ಯೋಜನೆಗಳನ್ನು ಮತ್ತು 37 ಒಳಚರಂಡಿ ಯೋಜನೆಗಳನ್ನು ಕೈಗೊಂಡಿದೆ. ಮಂಡಲಿಯು ಮೈಸೂರು ನಗರದ ಈಗಿರುವ ವಿತರಣೆ ಜಾಲ, ಯಾಂತ್ರೀಕರಣಗೊಳಿಸುವಿಕೆ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆಯನ್ನು ಪುನರ್‌ವಿನ್ಯಾಸಗೊಳಿಸುವ ಕಾರ್ಯವನ್ನು ಕೈಗೊಂಡಿದೆ. ಕನ್ನಡ ಗಂಗಾ ಯೋಜನೆಯ ಅಡಿಯಲ್ಲಿ ನಿರಂತರ ನೀರು ಸರಬರಾಜು ಮಾಡಲು 16 ನಗರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಮೂಲಭೂತ ಸೌಲಭ್ಯಗಳಲ್ಲಿ ಸುಧಾರಣೆ**

46. ಮೂಲಭೂತ ಸೌಲಭ್ಯಗಳ ಸುಧಾರಣೆಗೆ ನನ್ನ ಸರ್ಕಾರ ದೃಢ ಕ್ರಮಗಳನ್ನು ಕೈಗೊಳ್ಳುತ್ತಿದೆ. ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ವಿಸ್ತರಣಾ ಕಾರ್ಯವು ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯವನ್ನು ವರ್ಷಕ್ಕೆ 17.5 ದಶಲಕ್ಷದವರೆಗೆ ಹೆಚ್ಚಿಸಲಿದೆ. ಇನ್ನೊಂದೆಡೆ ಶಿವಮೊಗ್ಗ, ಗುಲ್ಬರ್ಗ, ಬಿಜಾಪುರ ಮತ್ತು ಹಾಸನದಲ್ಲಿ ಸಣ್ಣ ವಿಮಾನ ನಿಲ್ದಾಣಗಳನ್ನು ಖಾಸಗಿ ನಿರ್ವಾಹಕರಿಂದ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಅಭಿವೃದ್ಧಿಪಡಿಸಲಾಗುತ್ತಿದೆ. ಗುಲ್ಬರ್ಗ ಮತ್ತು ಶಿವಮೊಗ್ಗ ವಿಮಾನ ನಿಲ್ದಾಣಗಳೆರಡೂ ಜುಲೈ 2012ರ ಹೊತ್ತಿಗೆ ಕಾರ್ಯಾರಂಭಗೊಳ್ಳಲಿವೆ. ಈ ವರ್ಷದ ಅವಧಿಯಲ್ಲಿ, 12 ರೈಲ್ವೆ ಯೋಜನೆಗಳನ್ನು ವೆಚ್ಚ ಹಂಚಿಕೆ ಆಧಾರದ ಮೇಲೆ ಈಗಾಗಲೇ ಕೈಗೊಳ್ಳಲಾಗಿದೆ. ಹೆಚ್ಚು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಆಧಾರಿತ ಯೋಜನೆಗಳನ್ನು ಪ್ರೋತ್ಸಾಹಿಸಲು, ಸುಮಾರು 12 ಇಲಾಖೆಗಳು ಈ ಆರ್ಥಿಕ

ವರ್ಷವು ಕೊನಗೊಳ್ಳುವುದಕ್ಕೆ ಮುಂಚೆ ಪ್ರತ್ಯೇಕ ವ್ಯಾವಹಾರಿಕ ಸಲಹೆಗಾರರನ್ನು ಪಡೆಯಲಿವೆ.

**ವಿದ್ಯುತ್ ವಲಯ**

47. ಪರಿಸರ ನಿರಾಕ್ಷೇಪಣೆ ದೊರೆಯುವಲ್ಲಿ ಮತ್ತು ಅಗತ್ಯವಾದ ಕಲ್ಲಿದ್ದಲು ಹಂಚಿಕೆಯಲ್ಲಿ ಆಗುತ್ತಿರುವ ಅತಿಯಾದ ವಿಳಂಬದ ಕಾರಣದಿಂದಾಗಿ ವಿದ್ಯುತ್ ಉತ್ಪಾದನೆಯ ಹೊಸ ಯೋಜನೆಗಳು ಫಲಕಾರಿಯಾಗುತ್ತಿಲ್ಲದಿರುವುದು ದುರದೃಷ್ಟಕರ. ಆದರೂ, ನನ್ನ ಸರ್ಕಾರವು, ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು, ಕಾಲಕಾಲಕ್ಕೆ ಸಾಧ್ಯವಿರುವಷ್ಟು ವಿದ್ಯುತ್ತನ್ನು ಖರೀದಿಸುತ್ತಿದೆ.

48. ವಿದ್ಯುತ್‌ಜಾಲದ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಮತ್ತು ತಾಂತ್ರಿಕ ನಷ್ಟಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಸರ್ಕಾರವು ಸಾಂಪ್ರದಾಯಿಕ ಕೃಷಿ ಪಂಪ್‌ಸೆಟ್‌ಗಳಿಗೆ ಬದಲಾಗಿ ಅಧಿಕ ಕಾರ್ಯಕ್ಷಮತೆಯ ಪಂಪ್‌ಸೆಟ್‌ಗಳನ್ನು ಅಳವಡಿಸುವಂತಹ ಕೆಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಸ್ಮಾರ್ಟ್ ಗ್ರಿಡ್ ಎಂಬುದು ಇತ್ತೀಚಿನ ತಂತ್ರಜ್ಞಾನವಾಗಿದ್ದು, ಈ ತಂತ್ರಜ್ಞಾನದಿಂದ ಉತ್ಪಾದಿಸಲಾದ ವಿದ್ಯುತ್ತನ್ನು ಮತ್ತು ಅದರ ಬಳಕೆಯನ್ನೂ ಮೇಲ್ವಿಚಾರಣೆ ಮಾಡಬಹುದು. ಈ ಯೋಜನೆಗಾಗಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯನ್ನು ಪ್ರಾಯೋಗಿಕವಾಗಿ ಗುರುತಿಸಲಾಗಿದೆ.

49. ನಿರಂತರ ಜ್ಯೋತಿ ಯೋಜನೆಯು ಗ್ರಾಮೀಣ ಕುಟುಂಬಗಳಿಗೆ 24 ಗಂಟೆಗಳ ಗುಣಮಟ್ಟದ ವಿದ್ಯುತ್ತನ್ನು ಒದಗಿಸುವ ಮತ್ತು ನೀರಾವರಿ ಪಂಪ್‌ಸೆಟ್‌ಗಳಿಗೆ ನಿಗದಿತ ವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡುವ ಗುರಿ ಹೊಂದಿದೆ. ಈ ಯೋಜನೆಯನ್ನು ಒಟ್ಟು 2213 ಕೋಟಿ ರೂಪಾಯಿಗಳ ವೆಚ್ಚದಲ್ಲಿ 126 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಮೊದಲ ಹಂತವು 70 ತಾಲ್ಲೂಕುಗಳನ್ನು ಮತ್ತು ಎರಡನೇ ಹಂತವು 56

ತಾಲ್ಲೂಕುಗಳನ್ನು ಒಳಗೊಳ್ಳುತ್ತದೆ. ಬೆಳಕು ಯೋಜನೆಯ ಅಡಿಯಲ್ಲಿ ಇನ್‌ಕ್ಯಾಂಡಿಸೆಂಟ್ ಬಲ್ಬುಗಳಿಗೆ ಬದಲಾಗಿ ಸಿಎಫ್‌ಎಲ್ ಬಲ್ಬುಗಳನ್ನು ಬಳಕೆಗೆ ತರಲಾಗುತ್ತಿದೆ. ಈ ಕ್ರಮಗಳಿಂದಾಗಿ 2000 ಮೆಗಾ ಯುನಿಟ್ ವಿದ್ಯುತ್ ಉಳಿತಾಯವಾಗುವ ಭರವಸೆ ಇದೆ.

**ಕೈಗಾರಿಕಾ ವಲಯ**

50. 2010ರಲ್ಲಿ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಯಶಸ್ಸಿನಿಂದ ಉತ್ತೇಜನಗೊಂಡು, ನನ್ನ ಸರ್ಕಾರವು, 2012ರ ಜೂನ್ ತಿಂಗಳ 7–8ರಂದು ಮುಂದಿನ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ಯೋಜಿಸುತ್ತಿದೆ. ವಿವಿಧ ವಲಯಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಮೂಲಕ ಒಂದು ದಶಲಕ್ಷ ಉದ್ಯೋಗಗಳನ್ನು ಸೃಷ್ಟಿಸುವುದು ಮತ್ತು ರಾಜ್ಯದ ಜಿ.ಡಿ.ಪಿ. ಮಟ್ಟವನ್ನು ಹೆಚ್ಚಿಸುವುದು ನಮ್ಮ ಗುರಿಯಾಗಿದೆ.

51. ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಅದರ ಸುಸ್ಥಿರ ಅಭಿವೃದ್ಧಿಗೆ ಕರ್ನಾಟಕವು ಅನೇಕ ಕ್ರಮಗಳನ್ನು ಪ್ರಾರಂಭಿಸಿದೆ. ಅಕ್ರಮ ಗಣಿಗಾರಿಕೆ ಮತ್ತು ಕಬ್ಬಿಣದ ಅದಿರಿನ ಸಾಗಣೆಯನ್ನು ತಡೆಗಟ್ಟುವುದಕ್ಕಾಗಿ, ನನ್ನ ಸರ್ಕಾರವು ಪ್ರತ್ಯೇಕ ನಿಯಮಗಳನ್ನು ರೂಪಿಸಿದೆ. ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಗಟ್ಟಲು, “ಹೊಸ ಮರಳು ಕಾರ್ಯನೀತಿ 2011”ನ್ನು ಜಾರಿಗೊಳಿಸಲಾಗಿದೆ. ಕಲ್ಲುಗಳನ್ನು ಪುಡಿ ಮಾಡುವುದಕ್ಕೆ ಮತ್ತು ಸಂಸ್ಕರಿಸುವುದಕ್ಕೆ ಸಂಬಂಧಿಸುವ ವ್ಯವಹಾರವನ್ನು ನಿಯಂತ್ರಿಸುವುದಕ್ಕಾಗಿ, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011ನ್ನು ಇತ್ತೀಚೆಗೆ ಜಾರಿಗೊಳಿಸಲಾಗಿದೆ. ರಾಜ್ಯದಲ್ಲಿ, ಮೊದಲ ಬಾರಿಗೆ ಎಲ್ಲ ಪ್ರಧಾನ ಖನಿಜಗಳಿಗಾಗಿ ಇ–ಪರ್ಮಿಟ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

**ಉದ್ಯೋಗ ಮತ್ತು ಕಾರ್ಮಿಕ ವಲಯ**

52. ಕುಶಲ ತರಬೇತಿ ಮತ್ತು ಉದ್ಯೋಗ ಸೃಷ್ಟಿಗೆ ಪ್ರೋತ್ಸಾಹಿಸಲು ನನ್ನ ಸರ್ಕಾರ ಕೆಲವು ನವೀನ ಕ್ರಮಗಳನ್ನು ಪ್ರಾರಂಭಿಸಿದೆ. ಜರ್ಮನ್ ಬೆಂಬಲದೊಂದಿಗೆ ಎರಡು ಬಹು–ಕುಶಲತೆ ಅಭಿವೃದ್ಧಿ ಕೇಂದ್ರಗಳನ್ನು ಎಂದರೆ, ಬೆಂಗಳೂರಿನಲ್ಲಿ ಒಂದು ಮತ್ತು ಗುಲ್ಬರ್ಗಾದಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಲಾಗಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಅಡಿಯಲ್ಲಿ 76 ಐಟಿಐಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಆರು ಬೃಹತ್ ಉದ್ಯೋಗ ಮೇಳಗಳನ್ನು ಮತ್ತು 58 ಕಿರು ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿತ್ತು, ಆ ಮೂಲಕ 33,000 ಅಭ್ಯರ್ಥಿಗಳು ಕುಶಲ ತರಬೇತಿಗಾಗಿ ಆಯ್ಕೆಯಾಗಿದ್ದರು ಮತ್ತು 42,000 ಅಭ್ಯರ್ಥಿಗಳು ಉದ್ಯೋಗಗಳನ್ನು ಪಡೆದಿದ್ದಾರೆ.

53. ದೇಶದಲ್ಲೇ ಮೊದಲ ಬಾರಿಗೆ, ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾನವ ಸಂಪನ್ಮೂಲ ಕೇಂದ್ರಗಳಾಗಿ ಪರಿವರ್ತಿಸಲಾಗಿದೆ ಮತ್ತು ಆ ಪೈಕಿ 6 ಕೇಂದ್ರಗಳು ಬೇರೆ ಬೇರೆ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಅಡಿಯಲ್ಲಿ ಒಂಬತ್ತು ವಿಶೇಷ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. 2011–12ನೇ ಸಾಲಿನಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆಯಡಿ 4 ಲಕ್ಷ ಜನರನ್ನು ಯೋಜನೆ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅಸಂಘಟಿತ ಕಾರ್ಮಿಕರಿಗಾಗಿ ಸ್ವಾವಲಂಬನೆ ಯೋಜನೆಯಂಥ ಹೊಸ ವಿಶ್ರಾಂತಿ ವೇತನ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಕೆಲವೇ ರಾಜ್ಯಗಳ ಪೈಕಿ ಕರ್ನಾಟಕವೂ ಒಂದು.

**ಸಾರಿಗೆ**

54. ದೇಶದಲ್ಲಿನ ಎಲ್ಲ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಪೈಕಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೊದಲ ಸ್ಥಾನದಲ್ಲಿದೆ. ದೇಶದಲ್ಲೇ ಮೊದಲ ಬಾರಿಗೆ ವಿದ್ಯುನ್ಮಾನ ಚಾಲನಾ ಪರೀಕ್ಷಾ ಪಥದ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. 2011ರ ನವೆಂಬರ್‌ವರೆಗೆ 56 ಪ್ರಾದೇಶಿಕ ಸಾರಿಗೆ ಕಚೇರಿಗಳು ಡ್ರೈವಿಂಗ್ ಲೈಸೆನ್ಸ್‌ಗಳಿಗೆ ಬದಲಾಗಿ 44 ಲಕ್ಷ ಸ್ಮಾರ್ಟ್ ಕಾರ್ಡುಗಳನ್ನು ನೀಡಿವೆ. ವಿಶ್ವಬ್ಯಾಂಕ್ ಮತ್ತು ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯದ ಸುಸ್ಥಿರ ನಗರ ಸಾರಿಗೆ ಯೋಜನೆಯ ಅಡಿಯಲ್ಲಿ ಮಹತ್ವಾಕಾಂಕ್ಷೆಯ ಬೌದ್ಧಿಕ ಸಾರಿಗೆ ವ್ಯವಸ್ಥೆ [ಇಂಟಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಂ (ಐಟಿಎಸ್)] ಯನ್ನು, ಮೈಸೂರಿನಲ್ಲಿ, ವಾಸ್ತವಿಕ ಸಮಯ ಕೇಂದ್ರ ನಿಯಂತ್ರಣ ನಿಲ್ದಾಣ ಮತ್ತು ಸಮಗ್ರ ಸಾರಿಗೆ ಮಾಹಿತಿ ವ್ಯವಸ್ಥೆಯೊಂದಿಗೆ ಕೈಗೊಳ್ಳಲಾಗುತ್ತಿದ್ದು, ಇದು ಏಪ್ರಿಲ್ 2012ರ ಹೊತ್ತಿಗೆ ಪೂರ್ಣಗೊಳ್ಳಲಿದೆ.

**ರಸ್ತೆಗಳು ಮತ್ತು ಸೇತುವೆಗಳು**

55. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು, ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ), ಅಭಿವೃದ್ಧಿ, ಕಾರ್ಯಾರಂಭ ಮತ್ತು ವರ್ಗಾವಣೆ (ಬಿಒಟಿ) ಆಧಾರದಡಿಯಲ್ಲಿ ಮತ್ತು ಖಾಸಗಿ ಸಹ-ಹಣಕಾಸು ನೆರವಿನಡಿಯಲ್ಲಿ, 1816 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 630 ಕಿಲೋ ಮೀಟರ್‌ಗಳಷ್ಟು ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ನಿಗಮವು 253 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 11 ಪ್ರಮುಖ ಸೇತುವೆ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಂಡಿದೆ. "ಸುಂಕ ಸಂಗ್ರಹಣಾ ನಿಧಿ" ಅಡಿಯಲ್ಲಿ 1191 ಕಿಲೋ

ಮೀಟರ್‌ಗಳಷ್ಟು ಉದ್ದದ ರಸ್ತೆಗಳನ್ನು ಸುಧಾರಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಮಾಹಿತಿ ತಂತ್ರಜ್ಞಾನ/ ಜೈವಿಕ ತಂಜ್ಞಾನ ಮತ್ತು ವಿಜ್ಞಾನ**

56. ರಾಜ್ಯದಾದ್ಯಂತ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳನ್ನು ಪ್ರೋತ್ಸಾಹಿಸುವುದು ನನ್ನ ಸರ್ಕಾರದ ನೀತಿಯಾಗಿದೆ. ಶಿವಮೊಗ್ಗ ಮತ್ತು ಗುಲ್ಬರ್ಗಾಗಳಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕುಗಳು ಈಗಾಗಲೇ ಕಾರ್ಯ ಹಂತದಲ್ಲಿವೆ. ಸೈಬರ್ ಲ್ಯಾಬ್ ಅನ್ನು ಜುಲೈ 2011ರಲ್ಲಿ ಮಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಪ್ರೊ॥ ಸಿ.ಎನ್.ಆರ್. ರಾವ್ ಅವರ ನೇತೃತ್ವದ ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ ಮುನ್ನೋಟ ಗುಂಪು ರಾಜ್ಯದಲ್ಲಿ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆಯನ್ನು ಉತ್ತೇಜಿಸುವಲ್ಲಿ ಮತ್ತು ಅಭಿವೃದ್ಧಿಪಡಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿದೆ. ವಿಜ್ಞಾನ ಶಾಲೆಗಳು ಮತ್ತು ಉನ್ನತ ವಿಜ್ಞಾನ ಶಿಕ್ಷಣದ ಸಂಸ್ಥೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು ನಾವು ಯೋಜನೆಗಳನ್ನು ಆರಂಭಿಸಿದ್ದೇವೆ. ಮಂಗಳೂರು ತಾರಾಲಯವು ಮುಂದಿನ ವರ್ಷದ ಹೊತ್ತಿಗೆ ಸಿದ್ಧವಾಗಲಿದೆ ಮತ್ತು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರವು ಈಗಾಗಲೇ ಕಾರ್ಯನಿರ್ವಹಿಸುತ್ತಿದೆ.

**ಕನ್ನಡ ಮತ್ತು ಸಂಸ್ಕೃತಿಗೆ ಉತ್ತೇಜನ**

57. 2011ರ ಮಾರ್ಚ್ 11 ರಿಂದ 13ರವರೆಗೆ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು, ಯಶಸ್ವಿಯಾಗಿ ನಡೆಸಲಾಯಿತು. ಸುಮಾರು 20 ಲಕ್ಷ ಜನರು ಈ ಸಮ್ಮೇಳನದ ಉತ್ಸವಗಳಲ್ಲಿ ಭಾಗವಹಿಸಿದ್ದರು. ಡಿಸೆಂಬರ್ 2011ರಲ್ಲಿ, 4ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಸ್ಥಳೀಯ ಸಾಂಸ್ಕೃತಿಕ ಚಟುವಟಿಕೆಗಳಿಗೆ

ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ರಂಗಮಂದಿರಗಳನ್ನು ನಿರ್ಮಿಸಲಾಗುತ್ತಿದೆ.

**ಉತ್ತಮ ಆಡಳಿತ**

58. ನನ್ನ ಸರ್ಕಾರ ಉತ್ತಮ ಆಡಳಿತ ನೀಡಲು ಕಟಿಬದ್ಧವಾಗಿದೆ ಮತ್ತು ಈ ದಿಸೆಯಲ್ಲಿ ವಿವಿಧ ಕ್ರಮಗಳನ್ನು ಕೈಗೆತ್ತಿಕೊಂಡಿದೆ. ಇತ್ತೀಚೆಗೆ, ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 ಕಾಯ್ದೆಯನ್ನು ಅಧಿನಿಯಮಿಸಲಾಗಿದ್ದು, ನಿಯಮಗಳನ್ನು ಅಧಿಸೂಚಿಸಲಾಗುತ್ತಿದೆ. ಸದರಿ ಅಧಿನಿಯಮವು, "ಹಕ್ಕು" ಆಧಾರಿತ ದೃಷ್ಟಿಕೋನದ ಮುಖಾಂತರ ನಾಗರಿಕರಿಗೆ ಅಧಿಕಾರ ನೀಡುತ್ತದೆ ಮತ್ತು ಆಡಳಿತದಲ್ಲಿ ಪಾರದರ್ಶಕತೆಯನ್ನು ತರಲು ಮತ್ತು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಮತ್ತು ಆ ಮೂಲಕ ಸಾರ್ವಜನಿಕರ ಕುಂದುಕೊರತೆಗಳನ್ನು ಕಡಿಮೆ ಮಾಡಲು ಸಶಕ್ತವಾಗಲಿದೆ. ಹಂತ–Iರಲ್ಲಿ, 11 ಇಲಾಖೆಗಳ ಸುಮಾರು 151 ಸೇವೆಗಳನ್ನು ಈ ಉದ್ದೇಶಕ್ಕಾಗಿ ಅಧಿಸೂಚಿಸಲಾಗಿದೆ. 2012ರ ಮಾರ್ಚ್ 1ರಂದು, ನಾಲ್ಕು ತಾಲ್ಲೂಕುಗಳಲ್ಲಿ (ಪ್ರತಿ ಕಂದಾಯ ವಿಭಾಗದ ಒಂದು ತಾಲ್ಲೂಕಿನಲ್ಲಿ) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದಲ್ಲಿನ ಒಂದು ಕಂದಾಯ ಕಚೇರಿಯಲ್ಲಿ ಪ್ರಾಯೋಗಿಕವಾಗಿ ಈ ಕಾನೂನನ್ನು ಜಾರಿಗೆ ತರಲಾಗುವುದು.

59. ಪರಿಣಾಮಕಾರಿ ಕಾರ್ಯಪ್ರಗತಿ ನಿರ್ವಹಣೆಯ ಸಲುವಾಗಿ ಮತ್ತೊಂದು ಪ್ರಮುಖ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ನನ್ನ ಸರ್ಕಾರ, ಭಾರತ ಸರ್ಕಾರದ ಮಾದರಿಯಲ್ಲಿ ವಿವಿಧ ಇಲಾಖೆಗಳ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡುವ ಒಂದು ಸಾಧನವಾಗಿ ಫಲಿತಾಂಶ ಚೌಕಟ್ಟು ದಾಖಲೆ (ಆರ್‌ಎಫ್‌ಡಿ)ಯನ್ನು ತಯಾರಿಸುವ ಮೂಲಕ ತನ್ನ ಕಾರ್ಯನಿರ್ವಹಣೆಗೆ ಒಂದು

ಫಲಿತಾಂಶ ಕೇಂದ್ರಿತ ದೃಷ್ಟಿಕೋನವನ್ನು ಅಳವಡಿಸಿಕೊಂಡಿದೆ. ಆರ್‌ಎಫ್‌ಡಿ (ಫಲಿತಾಂಶ ಚೌಕಟ್ಟು ದಾಖಲೆ)ಯು ವರ್ಷದ ಆರಂಭದಲ್ಲಿ ಇಲಾಖೆಯು ಹೊಂದಿರುವ ಧ್ಯೇಯೋದ್ದೇಶಗಳನ್ನು ಮತ್ತು ವರ್ಷದ ಅಂತ್ಯಕ್ಕೆ ಇಲಾಖೆಯು ಸಾಧಿಸಿದ ಸಾಧನೆಗಳಿಗೆ ಸಂಬಂಧಿಸಿದ ವರದಿಗಳನ್ನು ಸಾರ್ವನಿಕರಿಗೆ ಬಹಿರಂಗಪಡಿಸುತ್ತದೆ.

60. ಸೆಪ್ಟೆಂಬರ್ 2011ರಲ್ಲಿ, ಕರ್ನಾಟಕವು ಎಲ್ಲಾ ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಒಂದು ಸ್ವತಂತ್ರ ಮೌಲ್ಯಮಾಪನ ಕಛೇರಿಯಾಗಿರುವ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಸ್ಥಾಪಿಸಿದ ಪ್ರಪ್ರಥಮ ರಾಜ್ಯವಾಗಿದೆ. ಪ್ರಾಧಿಕಾರವು, ಎಲ್ಲಾ ವಲಯಗಳಲ್ಲೂ ಕಾರ್ಯಕ್ರಮಗಳ ಫಲಿತಾಂಶ ಕೇಂದ್ರಿತ ಮತ್ತು ಫಲಿತಾಂಶ ಆಧಾರಿತ ಅನುಷ್ಠಾನಕ್ಕಾಗಿ ಕಾರ್ಯನೀತಿಗಳು, ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಹಾಗೂ ಅವುಗಳನ್ನು ಉತ್ತಮಪಡಿಸಲು ಇಲಾಖೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ, ಅವುಗಳಿಗೆ ಅನುಕೂಲ ಕಲ್ಪಿಸುತ್ತದೆ ಮತ್ತು ಅವುಗಳ ಸಾಮರ್ಥ್ಯವನ್ನು ವೃದ್ಧಿಸುತ್ತದೆ ಹಾಗೂ ಅವುಗಳಿಗೆ ಆಸರೆಯಾಗಿರುತ್ತದೆ.

61. ಕರ್ನಾಟಕವು ಇ–ಸಂಗ್ರಹಣೆಯಲ್ಲಿ ಒಂದು ಹೊಸ ಮಾರ್ಗ ಪ್ರವರ್ತಕ ರಾಜ್ಯವಾಗಿದೆ. ಈಗ, ಇದನ್ನು 104 ಇಲಾಖೆಗಳು/ ಸಂಸ್ಥೆಗಳಿಗೆ ವಿಸ್ತರಿಸಲಾಗಿದೆ ಮತ್ತು 87,000/– ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಸಂಚಿತ ಸಂಗ್ರಹಣೆಗಳನ್ನು ಮಾಡಲಾಗಿದೆ. ಈ ಪ್ರಕ್ರಿಯೆಯಿಂದ ಬಿಡ್ ಮೊಬಲಗಿನ ಜೊತೆಗೆ ಅಂದಾಜು ವೆಚ್ಚದಲ್ಲಿ ಕೂಡ ಶೇ. 10ಕ್ಕೂ ಮೇಲ್ಪಟ್ಟು ಇಳಿಕೆ ಉಂಟಾಗಿದೆ. 21,000ಕ್ಕೂ ಹೆಚ್ಚು ಪೂರೈಕೆದಾರರು/ ಗುತ್ತಿಗೆದಾರರು ಈ ವೇದಿಕೆಯಲ್ಲಿ ನೋಂದಾಯಿಸಿಕೊಂಡಿದ್ದಾರೆ.

62. ಕರ್ನಾಟಕ ಸ್ಟೇಟ್ ವೈಡ್ ಏರಿಯಾ ನೆಟ್‌ವರ್ಕ್ ಪ್ರಾಜೆಕ್ಟ್, 56 ಇಲಾಖೆಗಳನ್ನು ಒಳಗೊಂಡ 2800 ಸರ್ಕಾರಿ ಕಛೇರಿಗಳಿಗೆ ದತ್ತಾಂಶ, ಧ್ವನಿ ಮತ್ತು ದೃಶ್ಯ (ವಿಡಿಯೋ) ಸೇವೆಗಳನ್ನು ಒದಗಿಸಿದೆ. ಬೆಂಗಳೂರು–ಒನ್ ಕೇಂದ್ರವನ್ನು ಈಗ ಬೆಂಗಳೂರು ನಗರದಲ್ಲಿ 75 ಕೇಂದ್ರಗಳಿಗೆ ವಿಸ್ತರಿಸಲಾಗಿದೆ ಮತ್ತು 32 ಕರ್ನಾಟಕ–ಒನ್ ಕೇಂದ್ರಗಳನ್ನು ರಾಜ್ಯದಾದ್ಯಂತ ಸ್ಥಾಪಿಸಲಾಗಿದೆ. "ಆಧಾರ್" ಯೋಜನೆಯನ್ನು ರಾಜ್ಯದ 24 ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ.

63. ಸಾರ್ವಜನಿಕರಿಗೆ ಸುಧಾರಿತ ಸೌಲಭ್ಯಗಳು ಸಿಗುವಂತೆ ಮಾಡಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉದಾಹರಣೆಗೆ, ಎಲ್ಲಿಬೇಕಾದರೂ ಆಸ್ತಿಗಳ ನೋಂದಣಿ, ಪೂರ್ವಾಧಿ ಪ್ರಮಾಣಪತ್ರ ಮತ್ತು ದಸ್ತಾವೇಜುಗಳ ದೃಢೀಕೃತ ಪ್ರತಿಗಳ ನೀಡಿಕೆ ಸೌಲಭ್ಯವನ್ನು ಪಡೆಯುವ ವ್ಯವಸ್ಥೆಯನ್ನು ಬೆಂಗಳೂರು ನಗರ ಜಿಲ್ಲೆಯ ಐದು ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ 2011ರ ನವೆಂಬರ್ ತಿಂಗಳಿನಿಂದ ಜಾರಿಗೆ ತರಲಾಗಿದೆ. ಈ ಸೌಲಭ್ಯವನ್ನು ಹಂತಹಂತವಾಗಿ ಇಡೀ ರಾಜ್ಯಕ್ಕೆ ವಿಸ್ತರಿಸಲಾಗುವುದು. ಒಂದು ವಿಶೇಷ ಪೋಡಿ ಆಂದೋಲನವನ್ನು ಆರಂಭಿಸಲಾಗಿದೆ. ಪ್ರಾಯೋಗಿಕವಾಗಿ, ಈ ಆಂದೋಲನವನ್ನು ಮೈಸೂರು ವಿಭಾಗದ 13 ತಾಲ್ಲೂಕುಗಳ 13 ಹೋಬಳಿಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಕ್ರಮೇಣವಾಗಿ ರಾಜ್ಯದ ಉಳಿದ ತಾಲ್ಲೂಕುಗಳಿಗೂ ಕೂಡ ವಿಸ್ತರಿಸಲಾಗುವುದು.

**ರಾಷ್ಟ್ರೀಯ ಯುವಜನೋತ್ಸವ**

64. ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ರಾಷ್ಟ್ರೀಯ ಯುವಜನೋತ್ಸವ ನಡೆಸಲಾಯಿತು. 2012ರ ಜನವರಿ 12ರಿಂದ 15ರವರೆಗೆ ಮಂಗಳೂರಿನಲ್ಲಿ ನಡೆದ ಉತ್ಸವವು, ಪಾಲ್ಗೊಳ್ಳುವಿಕೆ, ಕಾರ್ಯಕ್ರಮಗಳು ಮತ್ತು ಭವ್ಯ ಸಿದ್ಧತೆಗಳಿಗೆ ಸಂಬಂಧಪಟ್ಟಂತೆ ಅಭೂತಪೂರ್ವ ಯಶಸ್ಸನ್ನು ಕಂಡಿತು. ಸರ್ಕಾರದ ಈ ಪ್ರಯತ್ನಗಳನ್ನು ಭಾರತ ಸರ್ಕಾರವು ಹೃತ್ಪೂರ್ವಕವಾಗಿ ಶ್ಲಾಘಿಸಿದೆ.

**ಪ್ರಶಸ್ತಿಗಳು ಮತ್ತು ಪುರಸ್ಕಾರಗಳು**

65. ನನ್ನ ಸರ್ಕಾರವು ಕಳೆದ 1 ವರ್ಷದಲ್ಲಿ ಹಲವಾರು ಪ್ರಶಸ್ತಿಗಳಿಗೆ ಮತ್ತು ಪ್ರಶಂಸೆಗಳಿಗೆ ಭಾಜನವಾಗಿದೆ ಎಂದು ಹೇಳಲು ನನಗೆ ಅತೀವ ಸಂತೋಷವೆನಿಸುತ್ತದೆ. ಅವುಗಳಲ್ಲಿ ಕೆಲವು ಈ ಮುಂದಿನಂತಿವೆ:–

- ಜೆ–ನರ್ಮ್ ಯೋಜನೆ – ಸಮಗ್ರ ವಸತಿ ಮತ್ತು ಕೊಳಗೇರಿ ಅಭಿವೃದ್ಧಿ ಕಾರ್ಯಕ್ರಮ (ಐಹೆಚ್‌ಎಸ್‌ಡಿಪಿ) ಅಡಿ "ಅತ್ಯುತ್ತಮ ನಗರ ಅನುಷ್ಠಾನ ಪ್ರಶಸ್ತಿ".

- ಕರ್ನಾಟಕ ಇ–ಸಂಗ್ರಹಣೆ ಯೋಜನೆಗೆ, 2010ನೇ ಸಾಲಿನ ಏಷ್ಯಾದ ಸಾರ್ವಜನಿಕ ವಲಯದಲ್ಲಿನ ಉತ್ತಮ ವ್ಯವಹಾರ ಪದ್ಧತಿಗಳಿಗಾಗಿ ನೀಡುವ ಫ್ಯೂಚರ್‌ಗೌ ಪ್ರಶಸ್ತಿ–2010 ದೊರಕಿದೆ.

- ಕ.ರಾ.ರ.ಸಾ.ಸಂ.ಯು ರಾಷ್ಟ್ರದಲ್ಲೇ ಅತ್ಯುತ್ತಮ ಸಾರಿಗೆ ಸಂಸ್ಥೆ ಎಂಬುದಾಗಿ ಹೊರಹೊಮ್ಮಿದೆ. ಇದು, ಇತ್ತೀಚಿನ ಬಸ್ಸು ಶ್ರೇಣಿಗಳ ಸೇರ್ಪಡೆ, ವಿಶ್ವದರ್ಜೆಯ ಸಾರಿಗೆ ಮೂಲಭೂತ ಸೌಕರ್ಯ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಪರಿಸರಸ್ನೇಹಿ ಉಪಕ್ರಮಗಳ ಬಳಕೆಯ ಕಾರಣದಿಂದಾಗಿ ರಾಷ್ಟ್ರ ಮತ್ತು

ಅಂತರ ರಾಷ್ಟ್ರೀಯ ಮಟ್ಟದ ಅನೇಕ ಪ್ರಶಸ್ತಿಗಳು ಮತ್ತು ಪ್ರಶಂಸೆಗಳಿಗೆ ಭಾಜನವಾಗಿದೆ. ಕ.ರಾ.ರ.ಸಾ.ಸಂ.ಗೆ ಕೇಂದ್ರ ಸರ್ಕಾರದ 1ನೇ ರಾಷ್ಟ್ರೀಯ ಎಫ್‌ಐಇಒ ಟೆಲಿಕಾಂ ಟೆಕ್ನಾಲಜಿ ಪ್ರಶಸ್ತಿ ಮತ್ತು "ಏಷ್ಯಾದ ಅತ್ಯುತ್ತಮ ಉದ್ಯೋಗದಾತ" ಪ್ರಶಸ್ತಿ ಹಾಗೂ ಸತತವಾಗಿ ನಾಲ್ಕನೇ ಬಾರಿ ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯವು ನೀಡುವ ಉತ್ಕೃಷ್ಟತಾ ಪ್ರಶಸ್ತಿಗಳು ದೊರಕಿವೆ.

66. ಜನಸ್ನೇಹಪರ ನೀತಿಗಳನ್ನು ರೂಪಿಸುವ ಉದ್ದೇಶದೊಂದಿಗೆ ತಮ್ಮ ಪಾತ್ರಗಳನ್ನು ರಚನಾತ್ಮಕವಾಗಿ ವಹಿಸಲು ಎಲ್ಲ ಶಾಸಕರನ್ನು ಒತ್ತಾಯಪಡಿಸುವ ಮೂಲಕ ನನ್ನ ಭಾಷಣ ಮುಕ್ತಾಯಗೊಳಿಸಲು ಇಚ್ಛಿಸುತ್ತೇನೆ. ಕರ್ನಾಟಕವನ್ನು ಇನ್ನೂ ಹೆಚ್ಚಿನ ಸಂಪದ್ಭರಿತ, ಶಾಂತಿಯುತ ಮತ್ತು ಪ್ರಗತಿಪರ ರಾಜ್ಯವನ್ನಾಗಿ ಮಾಡುವ ನಿಟ್ಟಿನಲ್ಲಿ ನಾನು ಎಲ್ಲ ಮಾನ್ಯ ಸದಸ್ಯರ ಸಹಕಾರವನ್ನು ಕೋರುತ್ತೇನೆ.

**"ಜೈ ಹಿಂದ್**

**ಜೈ ಕರ್ನಾಟಕ"**

SCNO 2
30/11/2012
117

**Honourable Chairman, Honourable Speaker and Honourable Members,**

1) It gives me great pleasure to welcome all of you to this joint session of the Karnataka Legislature.

2) I am very pleased to have the opportunity to serve the people of Karnataka and work for the welfare of the citizens of the State. Over the last three and a half years, my Government has been tirelessly striving hard to provide productive and efficient governance to the people. I urge you all to move ahead into this year with a strong resolve of giving even more accountable administration.

3) Over the last one year, we have successfully overcome many hurdles. We have made serious

efforts to accelerate the development of modern Karnataka that we are building through Vision 2020. I am glad to share with you that my Government over the last year has made rapid strides both in terms of governance, development and people-friendly schemes.

4) In spite of change in the political leadership, the Government is pursuing the development agenda and I compliment the new Chief Minister and his Cabinet colleagues for ensuring a smooth transition and continuity. I also appreciate both the ruling and opposition parties for their active participation and productive discussions in the Legislature Session held in December, 2011.

5) The recent Legislative Session witnessed passing of various Bills on issues like Guarantee of Services to the Citizens, Prohibiting Land Grabbing, Regulating Stone Crushers, Establishing Maritime Board, etc.

6) I would like to particularly congratulate the Chief Minister and the entire Legislature for unanimously approving the Guarantee of Services to Citizens Act. This is a land mark legislation to enable better governance and to have an effective grievance redressal mechanism. I am confident that the legal framework will go a long way in ensuring timely delivery of services to the Citizens.

7) Karnataka has yet again witnessed a peaceful year. The law and order situation has been very good and the State has not witnessed any communal incidence. Our Police force has done an excellent job in maintaining peace and controlling the naxal menace.

8) Karnataka was not fortunate enough to get adequate rain during the khariff season of 2011. The State witnessed conditions of drought in September, 2011. The highest deficiency (upto 24% of rain fall in the month of September) was the worst ever in the last 40 years. This has affected large tracts of land

leading to low crop yields. The State was however quick to respond to this situation and declared 99 taluks of 23 districts as "drought affected" and took immediate measures. The State has also submitted a memorandum to the Government of India seeking central assistance of Rs.723 crores.

## COMFORTABLE FINANCIAL STATUS

9) I am happy to state that the financial status of my Government is very sound. The slowdown of global economy and the moderation of growth of the country as a whole, in the current year has thrown up challenges to the State economy.

10) Even in such a scenario, Karnataka State has managed to maintain a very healthy tax revenue growth of over 20% coupled with over 15% growth in plan expenditure this year. The State has also continuously maintained a revenue surplus in the last four years. The borrowings of the State are within the permissible fiscal prudence norms. My

water and administrative approval has been accorded for a total project cost of over Rs.17,000 crores.

14) During this year, 57,000 hectares of fresh irrigation potential will be created. During the current year, 1.12 lakh hectares of water logged, saline and alkaline affected areas have been reclaimed. Centre for excellence under Integrated Water Resource Management (IWRM) scheme will be established by re-organizing and revamping other existing institutions. This centre for excellence will help in formulating IWRM principles, which will benefit the farmers of the State.

15) To protect and develop the traditional tanks across the State, the Minor Irrigation department, has focused on 631 tanks with the support from 13th Finance Commission's grants. My Government has also initiated several lift irrigation systems to benefit the SC/ST farmers.

16) In response to declining groundwater table and its quality, and to effectively monitor its utilisation, the State has enacted Karnataka Ground Water (Regulation & Control of Development and Management) Act, 2011.

## CO-OPERATIVE SECTOR

17) My Government continues to support Self Help Groups through provision of loans with reduced interest rate at 4%, through co-operative institutions. At present 12,562 women's groups are working in the State. Together, they have saved Rs.384 crore and Rs.228 crore loans has been advanced to them, till November 2011. Under the Yeshasvini Co-operative Farmers Health Care Scheme, nearly 33 lakh members have been covered.

## FOREST AND ECOLOGY

18) The draft "State of Environment Report 2011" has been prepared and placed for public comments. To create awareness among school children on the environmental issues, 7432 Eco-clubs have been formed in various High

Schools of our State. The State Bio-diversity Board has published 214 People Bio-diversity Registers.

19) During 2011-12, 6 crore seedlings have been planted in 65,000 hectare area and 1.5 crore seedlings have been distributed to the farmers and public. Daivi Vana nurseries are being established and the seedlings of religious importance, endangered species and local flower and fruit yielding plants will be distributed to local population. I am happy to say that Karnataka State has 300 tigers and occupies first place in the country in tiger population.

**RURAL DEVELOPMENT**

20) The State Government has accorded highest priority in implementing Mahatma Gandhi National Rural Employment Guarantee Scheme. Till December 2011, more than 54 lakh households have been issued job cards and 200 lakh person days of employment has been generated.

21) Under the Pradhana Mantri Gram Sadak Yojane, 1,091 km roads have been formed all over the State. Habitations with more than 2000 population have been connected with all-weather rural roads. I am happy to let you know that Karnataka stands second in the country in implementing PMGSY. The Gram Swaraj Project is being implemented to improve the service delivery mechanism of Gram Panchayats, particularly with respect to the management of public resources and the delivery of services that the local people prioritize and decide.

**HOUSING FOR THE POOR**

22) During the current year, some 52,000 houses have been built across the State.

23) Construction of houses with infrastructure facilities in slum areas has considerably improved in this year. In Bangalore, 18,180 houses covering 58 slums and in Mysore, 8,522 houses in 67 slums are in progress. Under Integrated Housing and Slum

Development Programme, construction of 17,237 houses with infrastructure facilities has been under taken. Under Basic Services to the Urban Poor Project, construction of houses with infrastructure facilities has been taken up in the slum areas of Bangalore and Mysore.

## IMPROVEMENT IN PUBLIC HEALTH

24) I am glad to let you know that due to concerted efforts of my Government, health indicators have improved considerably: Infant mortality rate has been reduced from 45 to 39; maternal mortality rate is down from 228 to 178; total fertility rate from 2.07 to 2.0, which is less than the target of 2.1 set by the Government of India, to be reached by the year 2012. The institutional deliveries have also improved from 65% to 93%.

25) To ensure availability of medical officers and other staff in Government hospitals in rural areas and to regulate transfers, the Karnataka State Civil Services (Regulation of Transfer of

Medical Officers and Other Staff) Act, 2011 has been enacted.

26) Till December, 2011, Arogya Kavacha Scheme has covered 4.40 lakh, and Vajpayee Arogya Sri Yojane has covered 19,000 persons.

27) Sophisticated medical equipments are being supplied to all Medical Colleges and teaching institutions and attached hospitals. Trauma Care Centre has been established at Belgaum.

**SOCIAL WELFARE**

28) To ameliorate the economic and social conditions of the people belonging to Scheduled Caste / Scheduled Tribes and Backward Classes, the Budgetary allocation during the year 2011-12 has been increased by 24% (i.e. Rs.2377 crores). Development of Scheduled Castes and Scheduled Tribes colonies with proper infrastructure facilities has been undertaken. During this year, the pre-matric Students Scholarship has been revised from Rs. 75 to Rs. 250 per month.

29) Construction of Dr. Ambedkar Bhavan, Dr. Jagjivan Ram Bhavan, Maharshi Valmiki Bhavan and other community halls are being taken up. Loan facility upto Rs. 2 crores at 4% rate of interest is being provided to small and medium entrepreneurs belonging to SCs/STs through KSFC. Subsidy assistance has been given to 61 community halls / hostels by different communities belonging to Backward Classes. Under the Ganga Kalyana Scheme, 3,362 borewells have been electrified.

30) Through Minority Development Corporation, around 20,000 students have been benefitted during the year 2011-12. To facilitate cultural and social programmes by the minority communities, in every District a Community Hall or Shadi Mahal will be constructed. For the first time, to enable community development works of Christians, Rs.50 crores have been separately provided.

31) My State has taken special measures to protect the wakf properties from encroachments.

Across the State, 1,200 wakf properties have been surveyed and their land records are being computerized. During 2011-12, 7,335 Haj pilgrims were supported. For construction of Haj Ghar in Bangalore, the State Government has provided Rs. 40 crores.

32) More than 35 lakh beneficiaries have been covered under various Social Security Pension Schemes at a cost of Rs. 2292 crores.

## WELFARE OF WOMEN

33) For the first time in India, new pension scheme has been started for anganwadi workers / assistants in Karnataka. Ex-Devadasis have been rehabilitated under Special Component Plan in all districts. The scheme of giving loan facilities to street vending women has commenced in a few cities.

## IMPROVEMENT IN EDUCATION

34) Karnataka has made rapid strides in education sector. The State Level Institute for School Leadership in Educational Planning and

Management has been established at Dharwad to propose administrative reforms. 304 Higher Primary Schools have been upgraded to High Schools by starting 9th Standard during 2011-12.

35) Free computers were distributed at the rate of 3 students per District, who have secured highest marks in 2011 in the 10th Standard examination.

36) Separate toilets for boys and girls are being constructed in all Government Primary Schools. Special emphasis is laid during 2011-12 for this programme under Pancha Soulabya Scheme covering playgrounds, drinking water, electricity and other facilities.

37) Karnataka is far ahead of other States in taking initiatives on knowledge front. The Karnataka Knowledge Commission, headed by Dr. Kasturirangan, Member, Planning Commission has over the last three years made several recommendations, conducted research studies and launched a few projects.

Its flagship programmes Jnana Fellow, is an innovative intervention introduced to enhance the interface between Government and young professionals. Today, 19 Jnana Fellows have been assigned projects by 8 Government departments. Another milestone has been the launch of KANAJA an e-portal dedicated to enriching the Kannada language as well as knowledge from other disciplines.

38) For the first time, Janapada University in Haveri District and Post-graduation Centre in Kushalnagar was established. Post-graduation courses have been started in 74 Government Colleges.

**BANGALORE DEVELOPMENT**

39) The much awaited Namma Metro, the first in South India, commissioned its first reach of 7.5 kms on October 20th in Bangalore. It got tremendous response from public. Every day, on an average 30,000 people are using the Metro. The Northern Corridor of 11 kms with 10 stations, from Peenya to Sampige Road is

scheduled to commence its operations by December 2012 and the entire Phase-1 is expected to be completed by December 2013.

40) The Bruhat Bangalore Mahanagara Palike has improved and asphalted 2280 km of road and another 35 km roads have been concreted. In addition, 12 pedestrian underpasses were constructed and 656 parks were improved.

41) To ease the traffic, Bangalore Development Authority has taken up construction of grade separators at 12 junctions in the outer ring road from Central Silk Board to Hebbal flyover and up to Tumkur Road Junction to create a signal free corridor for about 36 km stretch. BDA has also initiated the process to construct 14,000 houses for the economically weaker sections.

42) To retain and rejuvenate centuries old water bodies across the city, rejuvenation of 11 lakes has been completed and another 32 lakes are in the process.

**)THER URBAN AREAS**

43) For the first time in the country, on a pilot basis, in 5 cities, Urban Property Ownership Records on a GIS platform are being created. This would enable the property owners to have authentic records of their properties with geo reference. In a phased manner, this will be extended to all towns, including Bangalore City.

44) Computerization of basic municipal functions has been prioritized in 164 Urban Local Bodies. Additionally, Property Tax Information System is also under progress. For better planning, Satellite imagery is being used to map 27 urban areas. Chief Minister's Small and Medium Town Development Programme has been implemented in 211 Urban Local Bodies.

45) To enable better access to water supply and drainage systems across the State, the Karnataka Urban Water Supply & Drainage Board has undertaken 45 water supply and

37 underground drainage schemes under the JnNURM. The Board has taken up remodeling of existing distribution network, automation and integrated management system of Mysore City. Under the Kannada Ganga Scheme. 16 towns have also been selected to implement continuous water supply.

**IMPROVEMENT IN INFRASTRUCTURE**

46) My Government has been taking strong measures to improve infrastructure facilities. Expansion work in the Bangalore International Airport will increase passenger handling capacity to 17.5 millions per annum. On the other hand, minor airports at Shimoga, Gulbarga, Bijapur and Hassan are being developed on PPP basis through private operators. Both Gulburga and Shimoga airports will be operational by July 2012. During this year, 12 railway projects have already been taken up on a cost sharing basis. To encourage, more public-private-partnership based projects, nearly 12 departments will get

separate transaction advisors before the end of this financial year.

## ENERGY SECTOR

47) It is unfortunate that new projects for power generation have not fructified due to inordinate delays in Environmental clearance and allotment of coal linkages. However, my Government has, from time to time, been purchasing as much power as possible to meet the increasing demand.

48) In order to increase the efficiency of the network and to reduce the technical losses, Government has been implementing a few programmes like replacing the conventional agricultural pumps with high efficiency pump sets. Smart Grid is the latest technology in which the energy generated and the consumption can be monitored. Electronic City in Bangalore has been identified for the pilot project.

49) Nirantara Jyothi Scheme aims at providing 24 hours of quality power supply to rural households and fixed hours of power supply to irrigation pump sets. The scheme is being implemented in 126 taluks at a total cost of Rs. 2213 crores. First phase includes 70 taluks and second phase includes 56 taluks. Under Belaku Yojane, incandescent bulbs are being replaced by CFLs. By these measures, we hope to save around 2000 MU.

## INDUSTRIAL SECTOR

50) Encouraged by the successful Global Investors Meet held in 2010, my Government is planning to hold the next Global Investors Meet on 7th and 8th June 2012. The aim is to generate one million jobs by attracting large scale investments across various sectors and to improve the State's GDP level.

51) Karnataka has initiated different measures to conserve natural resources and its sustainable development. In order to curb illegal mining and transportation of iron ore, my Government

has framed separate Rules. To prevent illegal sand mining, the "New Sand Policy 2011" has been implemented. To regulate the business relating to crushing and processing of stones, "The Karnataka Regulation of Stone Crushers Act, 2011" has been enacted recently. e-Permit System has been implemented for the first time for all major minerals in the State.

**EMPLOYMENT AND LABOUR**

52) My Government has initiated some innovative measures to promote skill training and job generation. Two Multi-Skill Development Centers, one each in Bangalore and Gulbarga, have been established with German support. 76 ITIs have been upgraded under public - private partnership. Six mega job fairs and 58 mini job fairs have been organized through which 33,000 candidates were selected for skill training and 42,000 candidates have secured jobs.

53) For the first time in the country, Employment Exchanges have been converted into HRD

Centres and 6 of them are functional in different cities. Nine special residential schools have been started under the National Child Labour Project. Under the Rashtriya Swasthya Bima Yojana, 4 lakh people have been covered during the year 2011-12. Karnataka is one of the few States, which is implementing New Pension Scheme like Swavalamban Scheme for the unorganized workers.

**TRANSPORT**

54) Karnataka State Road Transport Corporation continues to stand first among all the State Road Transport Organizations in the Country. For the first time in the Country, the Electronic System of Driving Test Track has been established in Bangalore. Till November 2011, 56 RTOs have issued 44 lakh Smart Cards in place of Driving Licenses. The ambitious Intelligent Transport System (ITS) project taken up under Sustainable Urban Transport Project of World Bank and Ministry of Urban Development, GOI, is being implemented at

Mysore City with real time Central Control Station and extensive public information system which will be completed by April, 2012.

## ROADS AND BRIDGES

55) Karnataka Road Development Corporation Ltd. has taken up improvement of roads to an extent of 630 kms at an estimated cost of Rs. 1816 crores, under PPP, BOT basis and private co-financing. The Corporation has also taken-up 11 major bridge works at an estimated cost of Rs.253 crores. Action is being taken to improve 1191 kms length of roads under the "Toll Collection Fund".

## IT / BT AND SCIENCE

56) It is the policy of my Government to encourage IT parks across the State. IT parks in Shimoga and Gulbarga are already under execution. Cyber lab was launched in Mangalore in July 2011. The Vision Group on Science and Technology, headed by Prof. C.N.R. Rao, is playing pivotal role in promotion and

development of science education and research in the State. Schemes have been initiated to upgrade infrastructure facilities in science schools and institutions of higher science education. The Mangalore Planetorium will be ready by next year and the Karnataka State Natural Disaster Monitoring Centre at Bangalore is already functional.

**PROMOTING KANNADA AND CULTURE**

57) The World Kannada Conference was successfully organised at Belgaum from 11th – 13th March 2011. Around 20 lakh people participated in these celebrations. The 4th Bangalore International Film Festival was successfully organized during December 2011. Ranga Mandiras at District level are being constructed to facilitate local cultural activities.

**GOOD GOVERNANCE**

58) My Government is committed to good governance and various steps have been taken up in this regard. Recently, the Karnataka Guarantee of Services to Citizens Act, 2011

has been enacted and Rules are being notified. The Act will empower the citizen through a "Right" based approach and enable transparency in administration and curb corruption and reduce public grievances. During Phase-1, 152 services of 11 Departments have been notified for this purpose. On 1st of March 2012, the pilot would be launched in four taluks. (one per revenue division) and one revenue office in Bruhath Bangalore Mahanagara Palike area.

59) Another major step is moving towards effective performance management. My Government has adopted, an outcome oriented approach to its functioning through preparation of Results Framework Document (RFD), as a tool to measure performance of various departments, on the lines of Government of India. RFD discloses to the public, the objective of the department at the beginning of the year and reports, related achievements at the end of the year.

60) In September 2011, Karnataka was the first State to set up a Karnataka Evaluation Authority which is an Independent Evaluation Office for all Government schemes and programmes. The Authority will supervise, facilitate, build capacity and handhold the departments for effective planning, monitoring and fine tuning the policies, programmes & schemes for result oriented and outcome based implementation of the programmes across all the sectors.

61) Karnataka has become a trend setter in e-procurement. Now it has been extended to 104 Departments / Organizations and the cumulative procurement is valued at over Rs.87,000 crores. This process has resulted in reduction of over 10% in bid amount vis-a-vis the estimated expenditure. Over 21,000 suppliers / contractors have registered on this platform.

62) Karnataka State Wide Area Network Project has provided data, voice and video services to

2,800 Government offices, covering 56 Departments. Bangalore-One Centre has now been extended to 75 centres in Bangalore City and 32 Karnataka–One Centres have been established across the State. "AADHAR" has been extended to 24 Districts of the State.

63) Several measures to enable improved benefits to public have been initiated. For example, anywhere registration of properties, issue of encumbrance certificate and certified copies of documents, has been provided from November 2011 in five sub-registrar offices of Bangalore Urban District. This will be extended to the entire State in a phased manner. A Special Phodi Andholan has been initiated. As a pilot, it is being introduced in 13 hoblis of 13 taluks of Mysore Division. This Scheme will be gradually extended to rest of the State.

**NATIONAL YOUTH FESTIVAL**

64) The National Youth Festival was held for the first time in Karnataka. I am happy to state that the event held at Mangalore between

12th to 15th January 2012 was an unprecedented success in terms of the participation, events and the splendid preparation. The efforts of Government have been warmly appreciated by the Government of India.

## AWARDS AND ACCOLADES

65) It gives me pleasure to state that my Government has received several awards and appreciations over the last 1 year. Some of them are as follows:-

- The "Best City Implementation Award" under JnNURM - Integrated Housing and Slum Development Programme.

- Karnataka e-procurement project has been awarded Futuregov Award for 2010 for best business practices in Asia's public sector.

- KSRTC has emerged as the best Transport Corporation in the country. It has won several awards and appreciations at National and International levels on account of latest

fleet additions, world class transport infrastructure and use of Information Technology and Environmental friendly initiatives. It has been awarded Central Government's 1st National FIEO Telecom Technology Award, Asia's Best Employer Award, and Award for Excellence by Ministry of Urban Development, Government of India, four times in succession.

66) I would like to end by urging all the Legislators to play their roles constructively with the objective of formulation of people friendly policies. I seek the cooperation of all the Hon'ble Members in making Karnataka an even more prosperous, peaceful and progressive State.

**JAI HIND**

**JAI KARNATAKA**

## 2. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ:–** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

| ಕ್ರಮ ಸಂಖ್ಯೆ | ವಿಧೇಯಕದ ಹೆಸರು | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01 | ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ, 2011 | 27.12.2011 | ರಾಜ್ಯಪಾಲರು |
| 02 | ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2011 | 27.12.2011 | ರಾಜ್ಯಪಾಲರು |
| 03 | ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ವಿಧೇಯಕ, 2011 | 29.12.2011 | ರಾಜ್ಯಪಾಲರು |
| 04 | ಕರ್ನಾಟಕ ಧನವಿನಿಯೋಗ (ಸಂಖ್ಯೆ–6) ವಿಧೇಯಕ, 2011 | 31.12.2011 | ರಾಜ್ಯಪಾಲರು |
| 05 | ಕರ್ನಾಟಕ ಧನವಿನಿಯೋಗ (ಸಂಖ್ಯೆ–5) ವಿಧೇಯಕ, 2011 | 31.12.2011 | ರಾಜ್ಯಪಾಲರು |
| 06 | ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2011 | 02.01.2012 | ರಾಜ್ಯಪಾಲರು |

| ಕ್ರಮ ಸಂಖ್ಯೆ | ವಿಧೇಯಕದ ಹೆಸರು | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 07 | ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2011 | 02.01.2012 | ರಾಜ್ಯಪಾಲರು |
| 08 | ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2011 | 09.01.2012 | ರಾಜ್ಯಪಾಲರು |

## 3. ನೂತನ ಮುಖ್ಯಮಂತ್ರಿಗಳ ಪರಿಚಯ

**ಸಭಾಪತಿಯವರು:–** ಒಂದು ಮನವಿ, ಇವತ್ತು ಒಂದು ಸಂತೋಷದ ಸಮಯ, ಈ ಸಂತೋಷದ ಏನೆಂಬುದನ್ನು ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ. ನಮ್ಮ ಕರ್ನಾಟಕ ವಿಧಾನ ಪರಿಷತ್ತು ನಮ್ಮ ರಾಷ್ಟ್ರದಲ್ಲಿಯೇ ಅತಿ ಹಿರಿಯ ಹಾಗೂ ಹಳೆಯ ಸಭೆ ಎನ್ನುವ ಹೆಗ್ಗಳಿಕೆ ಇದ್ದರೂ ಸಹ ಇವತ್ತು ಮೊದಲ ಬಾರಿಗೆ ನಮ್ಮ ವಿಧಾನ ಪರಿಷತ್ತಿನ ಒಬ್ಬ ಗೌರವಾನ್ವಿತ ಸದಸ್ಯರು ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಈ ಸದನಕ್ಕೆ ಬಂದಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು. ಇದು ನಮ್ಮ ಸದನಕ್ಕೆ ಗೌರವ, ಹೆಮ್ಮೆ ಹಾಗೂ ಸಂತೋಷವನ್ನು ತರತಕ್ಕ ವಿಚಾರವಾಗಿದೆ. ಆದಕಾರಣ ನಾನು ನಿಮ್ಮೆಲ್ಲರ ಪರವಾಗಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿರತಕ್ಕ ಮಾನ್ಯ ಡಿ.ಬಿ. ಸದಾನಂದಗೌಡರನ್ನು ಸದನಕ್ಕೆ ಸ್ವಾಗತಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಡಿ.ಬಿ. ಸದಾನಂದಗೌಡರು ಎದ್ದುನಿಂತು ಸದನಕ್ಕೆ ನಮಸ್ಕರಿಸಿದರು.)

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಗಳೇ, ಈ ರಾಜ್ಯದ ಮುಖ್ಯಮಂತ್ರಿಗಳಾಗಿರತಕ್ಕ ಮಾನ್ಯ ಡಿ.ಬಿ. ಸದಾನಂದಗೌಡರ ನೇಮಕಾತಿಯಿಂದ ನಮ್ಮ ಸದನದ ಗೌರವ ಹೆಚ್ಚಾಗಿದೆ. ನಮ್ಮ ಸದನದ ಹಿರಿಮೆ–ಗರಿಮೆಗೆ ಒಂದು ದೊಡ್ಡ ಕೊಡುಗೆ ಇದಾಗಿದೆ. ಆದರೆ ಕೆಲವು ವಿಕೃತ ಮನಸ್ಸಿನ ವ್ಯಕ್ತಿಗಳು ಈ ಸದನವನ್ನು 'ಹಿಂಬಾಗಿಲು' ಹಿಂಬಾಗಿಲಿನಿಂದ ಬರುವವರು' ಎನ್ನುವ ವ್ಯಂಗ್ಯದ ಮಾತುಗಳನ್ನಾಡುತ್ತಾರೆ. ಈಗ ಮಾನ್ಯ ಮುಖ್ಯಮಂತ್ರಿಗಳ ಸೇರ್ಪಡೆಯಿಂದ ಈ ಮಾತಿಗೆ ಕೊನೆಗಾಣಲಿ ಎನ್ನುವುದು ನನ್ನ ಆಶಯ.

**ಸಭಾಪತಿಯವರು:–** 'ಹಿಂಬಾಗಿಲು–ಮುಂಬಾಗಿಲು' ಎನ್ನುವುದು ನಮ್ಮ ರಾಜ್ಯದಲ್ಲಿ ಮಾತ್ರವಿಲ್ಲ. ನಮ್ಮ ರಾಷ್ಟ್ರದಲ್ಲಿ 2–3 ಜನ ರಾಜ್ಯಸಭಾ ಸದಸ್ಯರು ಪ್ರಧಾನ ಮಂತ್ರಿಗಳಾಗಿದ್ದಾರೆ. ಬಿಹಾರ, ಉತ್ತರಪ್ರದೇಶ, ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ಸಹ ವಿಧಾನ ಪರಿಷತ್ತಿನ ಸದಸ್ಯರುಗಳು ಆ ರಾಜ್ಯಗಳ ಮುಖ್ಯಮಂತ್ರಿಗಳಾಗಿರುವ ಉದಾಹರಣೆಗಳಿವೆ. ಇನ್ನೂ ಅನೇಕ

ಉದಾಹರಣೆಗಳಿವೆ, ನನಗೆ ನೆನಪಾದಾಗಲೆಲ್ಲ ಅದರ ಬಗ್ಗೆ ಮಾಹಿತಿ ನೀಡುತ್ತೇನೆ. ಆದ್ದರಿಂದ ಮಾನ್ಯ ನಾಣಯ್ಯನವರು ಹೇಳಿದ ಹಾಗೆ ನಮ್ಮ ಸದನವನ್ನು ಹಿಂಬಾಗಿಲು ಎಂದು ಹೇಳುವುದು ಸೂಕ್ತವಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ನಮ್ಮ ಸದನವನ್ನು 'ಹಿಂಬಾಗಿಲು' ಎಂದು ಹೇಳುವುದು ಸರಿಯಲ್ಲ. ಏಕೆಂದರೆ ನಮ್ಮ ಸದನದಲ್ಲೂ ಕೂಡ ನಾವುಗಳು ಶಿಕ್ಷಕರ ಕ್ಷೇತ್ರ, ಪದವೀಧರರ ಕ್ಷೇತ್ರ, ಸ್ಥಳೀಯ ಸಂಸ್ಥೆಗಳು ಹೀಗೆ ವಿವಿಧ ಕ್ಷೇತ್ರಗಳಿಂದ ಆರಿಸಿ ಬಂದಿರುತ್ತೇವೆ. ಹಾಗಾಗಿ 'ಹಿಂಬಾಗಿಲು' ಎಂದಾಗ ನಮ್ಮ ಮನಸ್ಸಿಗೆ ನೋವಾಗುತ್ತದೆ. ನಮ್ಮ ಬಗ್ಗೆ 'ಹಿತ್ತಲ ಗಿಡ ಮದ್ದಲ್ಲ' ಎನ್ನುವ ಭಾವನೆ ಕೆಲವರಲ್ಲಿದೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಎಲ್ಲರೂ ನಮ್ಮ ಸದನವನ್ನು 'ಹಿರಿಯರ ಮನೆ' ಎಂದು ಕರೆಯುವಾಗ ನಾವಾಗಿ ನಾವೇ ಏಕೆ ನಮ್ಮ ಸದನವನ್ನು 'ಹಿಂಬಾಗಿಲು' ಎಂದು ಹೇಳಿಕೊಳ್ಳುವುದು ಸೂಕ್ತವಲ್ಲ ಎಂದು ಹೇಳುತ್ತಾ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಡಾ॥ ಶ್ರೀನಾಥ್:–** ಮಾನ್ಯ ಸಭಾಪತಿಯವರೆ, ಹಿಂದೆ 'ಹಿಂಬಾಗಿಲು' ಆಗಿದ್ದ ನಮ್ಮ ಸದನ ಈಗ ಹೆಬ್ಬಾಗಿಲಾಗಿದೆ.

## 4. ಸಂತಾಪ ಸೂಚನೆಗಳು

ಶ್ರೀಯುತ ಎಸ್. ಬಂಗಾರಪ್ಪ, ಶ್ರೀ ಮಂಜನಹಳ್ಳಿ ಮಹದೇವ್, ಶ್ರೀ ರಾಮಾ ಸಿದ್ಲಿಂಗ ನಿಡೋಶಿ, ಶ್ರೀ ಕೆ. ಸೋಮಪ್ಪ ಸುವರ್ಣ, ಶ್ರೀ ಸಿವಿಎಲ್ ಶಾಸ್ತ್ರಿ ಮತ್ತು ಡಾ॥ ಎಲ್. ಬಸವರಾಜ ಅವರ ನಿಧನದ ಕುರಿತು

**ಸಭಾಪತಿಯವರು:–** ಸದನದಲ್ಲಿ ದುಃಖದಾಯಕವಾದ ಕರ್ತವ್ಯವನ್ನು ನಿರ್ವಹಿಸಲು ನಾನು ಇಷ್ಟಪಡುತ್ತೇನೆ. ಹಿಂದಿನ ಸದನ ಮುಗಿದ ನಂತರ ಮತ್ತೆ ನಾವು ಇಂದು ಸದನ ಸೇರಿದ್ದೇವೆ. ಇಂದು ಘತನೆವೆತ್ತ ರಾಜ್ಯಪಾಲರು ನಮ್ಮನ್ನೆಲ್ಲ ಉದ್ದೇಶಿಸಿ ಮಾತನಾಡಿದ್ದಾರೆ. ಈ ಎರಡು ಸಂದರ್ಭಗಳ

ಮಧ್ಯದಲ್ಲಿ ಕೆಲವು ಹಿರಿಯ ನಾಡಿನ ಗಣ್ಯರು ನಮ್ಮನ್ನು ಅಗಲಿದ್ದಾರೆ. ಆದ್ದರಿಂದ ಅವರಿಗೆ ಗೌರವ ಸೂಚಿಸುವಂತಹ, ಅವರ ನೆನಪು ಮಾಡಿಕೊಳ್ಳುವಂತಹ ಕರ್ತವ್ಯವನ್ನು ನಾನು ನಿರ್ವಹಿಸುತ್ತಿದ್ದೇನೆ.

**ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಸಂಸದರಾದ ಶ್ರೀ ಎಸ್. ಬಂಗಾರಪ್ಪ, ವಿಧಾನಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಮಂಚನಹಳ್ಳಿ ಮಹದೇವ್, ಶ್ರೀ ರಾಮಾ ಸಿದ್ಲಿಂಗ್ ನಿಡೋಣಿ, ಶ್ರೀ ಕೆ. ಸೋಮಪ್ಪ ಸುವರ್ಣ, ಕನ್ನಡದ ಹೆಸರಾಂತ ಚಲನ ಚಿತ್ರೋದ್ಯಮಿ ಶ್ರೀ ಸಿ.ವಿ.ಎಲ್. ಶಾಸ್ತ್ರಿ ಮತ್ತು ಕನ್ನಡದ ಹಿರಿಯ ವಿದ್ವಾಂಸ, ಸಾಹಿತಿ ಡಾ॥ ಎಲ್. ಬಸವರಾಜು ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.**

**ಶ್ರೀ ಎಸ್. ಬಂಗಾರಪ್ಪ**

**ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಎಸ್. ಬಂಗಾರಪ್ಪ ಅವರು ದಿನಾಂಕ: 25.12.2011 ರಂದು ನಿಧನ ಹೊಂದಿರುತ್ತಾರೆ.**

1933ರ ಅಕ್ಟೋಬರ್, 26ರಂದು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕುಬಟೂರು ಗ್ರಾಮದಲ್ಲಿ ಜನಿಸಿದ ಶ್ರೀಯುತರು ಕಾನೂನು ಪದವೀಧರರಾಗಿದ್ದು 'ಸಮಾಜ ವಿಜ್ಞಾನದಲ್ಲಿ ಡಿಪ್ಲೊಮ' ಪದವಿಯನ್ನು ಪಡೆದಿದ್ದರು.

ಸಮಾಜವಾದಿ ನಾಯಕ ಶಾಂತವೀರ ಗೋಪಾಲಗೌಡರ ಶಿಷ್ಯರಾಗಿ 1962ರಲ್ಲಿ ರಾಜಕೀಯ ವಲಯಕ್ಕೆ ಪಾದಾರ್ಪಣೆ ಮಾಡಿದ ಇವರು 1967 ರಿಂದ 1999ರವರೆಗೆ ಸತತವಾಗಿ 4,5,6,7,8 ಮತ್ತು 10ನೇ ವಿಧಾನಸಭೆಗೆ 7 ಬಾರಿ ಸೊರಬ ಮತಕ್ಷೇತ್ರದಿಂದ ಆಯ್ಕೆಯಾಗಿ ಮೂರು ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಸೋಲಿಲ್ಲದ ಸರದಾರ ಎಂಬ ಖ್ಯಾತಿಯನ್ನು ಪಡೆದಿದ್ದರು. 1977ರಲ್ಲಿ ಮೊದಲ ಬಾರಿಗೆ ವೀರೇಂದ್ರ ಪಾಟೀಲ್ ಸಂಪುಟದಲ್ಲಿ ಗೃಹ ಸಚಿವರಾಗಿ, 1978ರಲ್ಲಿ ಲೋಕೋಪಯೋಗಿ ಸಚಿವರಾಗಿ 1980–81ರಲ್ಲಿ ಕಂದಾಯ, ಕೃಷಿ ಖಾತೆ ಸಚಿವರಾಗಿ ಹಾಗೂ 1989–90ರವರೆಗೆ ಕೃಷಿ ಮತ್ತು ತೋಟಗಾರಿಕಾ ಸಚಿವರಾಗಿ ಕಾರ್ಯ

ನಿರ್ವಹಿಸಿದ್ದರು. ಕಂದಾಯ ಮತ್ತು ಕೃಷಿ ಇಲಾಖೆಗಳಲ್ಲಿ ಸಮರ್ಥ ನಿರ್ವಹಣೆಗೆ ಪ್ರಶಂಸೆಯನ್ನು ಪಡೆದಿದ್ದರು. ಕರ್ನಾಟಕ ಕ್ರಾಂತಿರಂಗ, ಕರ್ನಾಟಕ ಕಾಂಗ್ರೆಸ್ ಪಕ್ಷ, ಕರ್ನಾಟಕ ವಿಕಾಸ ಪಕ್ಷಗಳ ಜನಕರಾಗಿದ್ದರು.

1985 ರಿಂದ 1987ರವರೆಗೆ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿ ಶ್ರೀಸಾಮಾನ್ಯರ ಅನೇಕ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಿ ಧೀಮಂತ ನಾಯಕರೆಂದು ಗುರುತಿಸಿಕೊಂಡಿದ್ದರು. 1990–92ರಲ್ಲಿ ರಾಜ್ಯದ 12ನೇ ಮುಖ್ಯಮಂತ್ರಿಯಾಗಿ ಜನಪರ ಯೋಜನೆಗಳಾದ ಆರಾಧನಾ, ಆಶ್ರಯ, ಗ್ರಾಮೀಣ ಭಾಗದಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಸರ್ಕಾರದ ಉದ್ಯೋಗದಲ್ಲಿ ಶೇ. 15ರಷ್ಟು ಕೃಪಾಂಕ ನೀಡಿಕೆ ಹಾಗೂ ರೈತರಿಗೆ 10 ಹೆಚ್.ಪಿ.ವರೆಗಿನ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಯೋಜನೆಗಳ ರೂವಾರಿಯಾಗಿದ್ದ ಶ್ರೀಯುತರಿಗೆ ಅನೇಕ ಪ್ರಥಮಗಳ ದಾಖಲೆಯನ್ನು ನಿರ್ಮಿಸಿದ ಕೀರ್ತಿ ಸಲ್ಲುತ್ತದೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ದೀಮಂತ, ಹಿರಿಯ ಪ್ರಾಮಾಣಿಕ, ವರ್ಣರಂಜಿತ ರಾಜಕಾರಣಿ ಮತ್ತು ಹಿಂದುಳಿದ ವರ್ಗದ ನಾಯಕರನ್ನು ಕಳೆದುಕೊಂಡಂತಾಗಿದೆ.**

**ಶ್ರೀ ಮಂಚನಹಳ್ಳಿ ಮಹದೇವ**

**ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಮಂಚನಹಳ್ಳಿ ಮಹದೇವ ಅವರು ದಿನಾಂಕ: 17.12.2011ರಂದು ನಿಧನ ಹೊಂದಿರುತ್ತಾರೆ.**

1964ರ ಜೂನ್, 15ರಂದು ಮೈಸೂರು ಜಿಲ್ಲೆಯ ಕೆ.ಆರ್. ನಗರದಲ್ಲಿ ಜನಿಸಿದ್ದ ಶ್ರೀಯುತರು ಕಾನೂನು ಪದವೀಧರರಾಗಿದ್ದು ವೃತ್ತಿಯಲ್ಲಿ ವಕೀಲರಾಗಿದ್ದರು. ರಾಜ್ಯ ಯುವ ಜನತಾದಳದ ಅಧ್ಯಕ್ಷರಾಗಿದ್ದ ಶ್ರೀಯುತರು ಆಧ್ಯಾತ್ಮಿಕತೆಯ ಕುರಿತು ಹೆಚ್ಚಿನ ಒಲವನ್ನು ಹೊಂದಿದ್ದರು. 2004ರ ಚುನಾವಣೆಯಲ್ಲಿ ಕೃಷ್ಣರಾಜನಗರ ಮತ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಯುವ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**ಶ್ರೀ ರಾಮಾ ಸಿದ್ಲಿಂಗ ನಿಡೋಣಿ**

**ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ರಾಮಾ ಸಿದ್ಲಿಂಗ ನಿಡೋಣಿ ಅವರು ದಿನಾಂಕ: 18–01–2012ರಂದು ನಿಧನ ಹೊಂದಿರುತ್ತಾರೆ.**

1943ರ ಮಾರ್ಚ್, 20ರಂದು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಹಾರೂಗೇರಿ ಗ್ರಾಮದಲ್ಲಿ ಜನಿಸಿದ ಇವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸಮಾಜ ಸೇವೆಯಲ್ಲಿ ಆಸಕ್ತಿಯನ್ನು ಹೊಂದಿದ್ದ ಶ್ರೀಯುತರು 6ನೇ ವಿಧಾನ ಸಭೆಗೆ 1978ರಲ್ಲಿ ರಾಯಬಾಗ ಮತಕ್ಷೇತ್ರದಿಂದ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಯುವ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**ಶ್ರೀ ಸೋಮಪ್ಪ ಸುವರ್ಣ**

**ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಸೋಮಪ್ಪ ಸುವರ್ಣ ಅವರು ದಿನಾಂಕ: 28.01.2012ರಂದು ನಿಧನ ಹೊಂದಿರುತ್ತಾರೆ.**

1929ರ ಅಕ್ಟೋಬರ್, 07ರಂದು ಜನಿಸಿದ ಇವರು ವೃತ್ತಿಯಲ್ಲಿ ವ್ಯಾಪಾರಸ್ಥರು ಹಾಗೂ ಕೃಷಿಕರಾಗಿದ್ದರು. ಸೇವೆಯಲ್ಲಿ ಆಸಕ್ತಿಯನ್ನು ಹೊಂದಿದ್ದ ಶ್ರೀಯುತರು ಮುಲ್ಕಿ, ಹಾಲು ಹಂಚಿಕೆ ಸಹಕಾರಿ ಸಂಘ, ಮುಲ್ಕಿ, ಬಿಲ್ಲರ ಸಮಾಜ ಸೇವಾ ಸಂಘ ಮತ್ತು ತಾಲ್ಲೂಕು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 1989ರ ನವೆಂಬರ್‌ನಲ್ಲಿ ಮೂಡಬಿದ್ರಿ ಕ್ಷೇತ್ರದಿಂದ 9ನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

**ಇವರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ**

**ಶ್ರೀ ಸಿ.ವಿ.ಎಲ್. ಶಾಸ್ತ್ರಿ**

**ಕನ್ನಡದ ಹೆಸರಾಂತ ಚಿತ್ರೋದ್ಯಮಿ ಶ್ರೀ ಸಿ.ವಿ.ಎಲ್. ಶಾಸ್ತ್ರಿ ಅವರು ದಿನಾಂಕ: 05.01.2012ರಂದು ನಿಧನ ಹೊಂದಿರುತ್ತಾರೆ.**

ಮೂಲತಃ ರಾಮನಗದವರಾದ ಶ್ರೀಯುತರು ಐವತ್ತರ ದಶಕದಲ್ಲಿ ಬೆಂಗಳೂರಿಗೆ ಬಂದು ನೆಲೆಸಿ ಕನ್ನಡ ಚಲನ ಚಿತ್ರೋದ್ಯಮದಲ್ಲಿ ತೊಡಗಿಸಿಕೊಂಡು ಕಳ್ಳಕುಳ್ಳ, ಮಲಯ ಮಾರುತ, ಪಕ್ಕಾಕಳ್ಳ, ಹೆಣ್ಣು ಹುಲಿ, ಆಸೆಯ ಬಲೆ ಮುಂತಾದ ಯಶಸ್ವಿ ಚಲನಚಿತ್ರಗಳನ್ನು ನಿರ್ಮಿಸಿದ್ದರು. ಇವರ ನಿರ್ಮಾಣದ ಮಲಯ ಮಾರುತವಲ್ಲದೆ 'ಆತಂಕ' ಚಿತ್ರಕ್ಕೆ ಆರು ರಾಜ್ಯ ಪ್ರಶಸ್ತಿಗಳು ಬಿಂದಿವೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ಅಪಾರವಾದ ಸೇವೆಯನ್ನು ಸಲ್ಲಿಸಿ, ಕನ್ನಡ ಚಿತ್ರೋದ್ಯಮದ ಬೆಳವಣಿಗೆಗೆ ಅವಿರತವಾಗಿ ಶ್ರಮಿಸಿದ ಇವರು ಶಾಸ್ತ್ರಿ ಮೂವೀಸ್, ಶಾಸ್ತ್ರಿ ಸಿನಿ ಆರ್ಟ್ಸ್ ಪ್ರೋಡಕ್ಷನ್ ಸಂಸ್ಥೆಗಳ ಮೂಲಕ ಹಲವು ಕನ್ನಡ ಚಿತ್ರಗಳ ನಿರ್ಮಾಪಕರಾಗಿ, ಹಂಚಿಕೆದಾರರಾಗಿ ಕನ್ನಡ ಚಲನ ಚಿತ್ರೋದ್ಯಮಕ್ಕೆ ಅನನ್ಯವಾದ ಕೊಡುಗೆ ನೀಡಿದ್ದಾರೆ. 1980ರ ದಶಕದಲ್ಲಿ ಡಾ॥ ರಾಜಕುಮಾರ್ ಅಭಿಮಾನಿಗಳ ಸಂಘದ ಗೌರವಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದ ಶ್ರೀಯುತರು 'ಫಾಲ್ಕೆ ಅಕಾಡೆಮಿ' ಪ್ರಶಸ್ತಿಯೂ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಅಲ್ಲದೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಮೂಲಕ ಸಮಾಜ ಸೇವೆಯಲ್ಲಿಯೂ ಸಹ ತೊಡಗಿಸಿಕೊಂಡಿದ್ದರು.

**ಇವರ ನಿಧನದಿಂದಾಗಿ ರಾಜ್ಯವು ಹಿರಿಯ ಚಲನ ಚಿತ್ರೋದ್ಯಮಿ ಹಾಗೂ ಸಮಾಜ ಸೇವಕರನ್ನು ಕಳೆದುಕೊಂಡಂತಾಗಿದೆ.**

## ಡಾ॥ ಎಲ್. ಬಸವರಾಜು

**ಕನ್ನಡ ಸಾಹಿತ್ಯ ಲೋಕದ ವಿಶಿಷ್ಟ ವಿದ್ವಾಂಸ, ಅಚ್ಚರಿಯ ಕವಿ, ವಿಭಿನ್ನ ವಿಚಾರ ಶೀಲ ಸಾಹಿತಿ ಡಾ॥ ಎಲ್. ಬಸವರಾಜು ಅವರು ದಿನಾಂಕ: 29.01.2012ರಂದು ನಿಧನ ಹೊಂದಿರುತ್ತಾರೆ.**

1919ರ ಅಕ್ಟೋಬರ್, 7ರಂದು ಕೋಲಾರದ ಇಡಗೂರಿನಲ್ಲಿ ಜನಿಸಿದ ಇವರು ಕನ್ನಡ ಸಾಹಿತ್ಯ ಲೋಕದಲ್ಲಿ 'ಎಲ್‌ಬಿ' ಎಂದೇ ಖ್ಯಾತರಾಗಿದ್ದರು. ಗ್ರಂಥ ಸಂಪಾದನೆ, ಹಳೆಗನ್ನಡದಲ್ಲಿ ವಿಶೇಷ ಪಾಂಡಿತ್ಯವನ್ನು ಸಾಧಿಸಿದ್ದ ಶ್ರೀಯುತರು ಚಿತ್ರದುರ್ಗದಲ್ಲಿ ನಡೆದ 75ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಹಾಗೂ ಅಖಿಲ ಭಾರತ ಶರಣ ಸಾಹಿತ್ಯದ ಅಧ್ಯಕ್ಷರಾಗಿದ್ದರು. ಇವರು 50ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಪಂಪನ ಆದಿ ಪುರಾಣ, ವಚನ ಚಿಂತನ, ಪಂಪಭಾರತ ಕಥಾಮೃತ, ಬುದ್ಧಚರಿತೆ, ನೂರು ಶರಣರ ಸಾವಿರ ವಚನಗಳು ಮತ್ತು ಹಳೆಗನ್ನಡದ ವಿಶೇಷ ಶಬ್ಧಕೋಶ ಇವರ ಪ್ರಮುಖ ಗ್ರಂಥಗಳಾಗಿವೆ.

ಗ್ರಂಥಸಂಪಾದನೆಯಲ್ಲಿ ವಿಶೇಷ ಹಿರಿಮೆಯನ್ನು ಸಾಧಿಸಿದ್ದ ಶ್ರೀಯುತರನ್ನು 'ಲಯಾಕಾರ ವಿನ್ಯಾಸಕಾರ' ಎಂದೇ ಗ್ರಂಥ ಸಂಪಾದನೆ ಕ್ಷೇತ್ರದಲ್ಲಿ ಗುರುತಿಸಲಾಗಿದೆ. ಪಂಪ, ರನ್ನರನ್ನು ಸರಳ ಓದಿಗೆ ದೊರಕಿಸಿಕೊಟ್ಟ ಕನ್ನಡದ ಉದ್ದಾಮ ಪಂಡಿತರೆಂದೇ ಖ್ಯಾತರಾದ ಶ್ರೀಯುತ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಬಸವ ಪುರಸ್ಕಾರ, ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಭಾಷಾ ಸಮ್ಮಾನ್ ಪ್ರಶಸ್ತಿಗಳಲ್ಲದೆ ಇನ್ನು ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

**ರಾಜ್ಯವು ಶ್ರೀಯುತರ ನಿಧನದಿಂದಾಗಿ ಕನ್ನಡ "ಸಾರಸ್ವತ ಲೋಕ"ವು ಹೆಸರಾಂತ ಖ್ಯಾತ ಸಾಹಿತಿಯೊಬ್ಬರನ್ನು ಕಳೆದುಕೊಂಡು ಬಡವಾಗಿದೆ.**

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೆ, ತಾವು ಮಂಡಿಸಿರುವಂತಹ ಸಂತಾಪ ಸೂಚನೆಗೆ ಅನುಮೋದನೆಯನ್ನು ನೀಡುತ್ತೇನೆ. ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ, ಹಿರಿಯರಾಗಿದ್ದ ಮಾನ್ಯ ಬಂಗಾರಪ್ಪನವರು, ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಮಂಚನಹಳ್ಳಿ ಮಹದೇವರವರು, ಶ್ರೀ ರಾಮಾ ಸಿದ್ಲಿಂಗ ನಿಡೋಣಿ, ಶ್ರೀ ಸೋಮಪ್ಪ ಸುವರ್ಣ, ಶ್ರೀ ಸಿ.ವಿ.ಎಲ್.ಶಾಸ್ತ್ರಿ, ಹಿರಿಯ ವಿದ್ವಾಂಸರಾದ ಡಾ॥ ಎಲ್‌ಬಸವರಾಜುರವರು ನಮ್ಮನ್ನು ಅಗಲಿದ್ದಾರೆ. ಇವರಿಗೆ ಸಂತಾಪಸೂಚನೆಯನ್ನು ಸಲ್ಲಿಸುತ್ತಾ, ಕರ್ನಾಟಕ ಕಂಡಂತಹ ವಿಶೇಷ ರಾಜಕಾರಣಿ ಎಂದರೆ, ಮಾನ್ಯ ಬಂಗಾರಪ್ಪನವರು ಎಂದು ನಾನು ಭಾವಿಸುತ್ತೇನೆ. ಯಾರ ಪಟ್ಟಿಗೂ ಸಿಗದಂತಹ ರಾಜಕಾರಣಿಯವರನ್ನು ನಾವು ಕರ್ನಾಟಕದಲ್ಲಿ ಕಂಡಿದ್ದೇವೆ ಎಂದರೆ ಅವರು ಬಂಗಾರಪ್ಪನವರು. ಎಲ್ಲೆಲ್ಲಿ ತಮ್ಮ ಪಟ್ಟನ್ನು ಹಾಕಬೇಕು ಅಲ್ಲೆಲ್ಲ ಬೇರೆ-ಬೇರೆ ಹಂತದಲ್ಲಿ ಅವರು ಹಾಕಿದ್ದಾರೆ. ರಾಜಕಾರಣದಲ್ಲಿ ಯಾವ-ಯಾವ ಹಂತದಲ್ಲಿ ಬದಲಾವಣೆಯನ್ನು ತರಬೇಕೆಂದು ಆಲೋಚನೆ ಮಾಡಿದರು, ಆ ಆಲೋಚನೆಯಲ್ಲಿ ಅವರು ಬೇರೆ-ಬೇರೆ ಹಂತಗಳಲ್ಲಿ ಯಶಸ್ವಿಯಾಗಿದ್ದಾರೆ. ತಮ್ಮದೇ ಆದ ಛಾಪನ್ನು ಅವರು ಮೂಡಿಸಿದ್ದಾರೆ. ಅವರಿಗೆ ರಾಜಕಾರಣದಲ್ಲಿ ಒಂದು ವಿಚಾರ ಸ್ಪಷ್ಟ ಎಂದು ಅನ್ನಿಸಿದರೆ ಅವರು ಅದೇ ದಾರಿಯಲ್ಲಿ ಹೋಗುವವರು. ಆ ಒಂದು ಪಕ್ಷದಲ್ಲಿ, ಒಂದು ಸಂಘಟನೆಯಲ್ಲಿ ಇದ್ದರೂ ಕೂಡ ಆ ಸಂಘಟನೆಯ ಮಧ್ಯದಲ್ಲಿಯೂ ಕೂಡ ತನ್ನ ವ್ಯಕ್ತಿತ್ವ, ತನ್ನ ವರ್ಚಸ್ಸನ್ನು ಉಳಿಸಿಕೊಂಡವರಾಗಿದ್ದರು. ಸಾಧಾರಣವಾಗಿ ಸಂಘಟನೆಯಲ್ಲಿ ಎಲ್ಲರೂ ಸೇರಿಕೊಂಡಾಗ ಸಂಘಟನೆಯ ಒತ್ತಡಕ್ಕೆ ಮಣಿದು, ತನ್ನ ಸ್ವಂತಿಕೆಯನ್ನು ಕಳೆದುಕೊಂಡು ಅದರ ಜೊತೆಯಲ್ಲಿ ಹೋಗುವಂತಹ ರಾಜಕಾರಣಿಗಳ ಸಂಖ್ಯೆ ಇವತ್ತು ಜಾಸ್ತಿ ಇರುವುದನ್ನು ನಾವು ನೋಡುತ್ತಿದ್ದೇವೆ. ಯಾವುದೋ ಒಂದು ಪಕ್ಷ ಇದ್ದರೆ, ಮತ್ತೊಂದು ಇದ್ದರೆ ಮೇಲಿಂದ ಆದೇಶ ಬಂದರೆ, ಸೂಚನೆ ಬಂದರೆ ಅನಿವಾರ್ಯವಾಗಿ ಅದರ ಜೊತೆ ಹೋಗುವಂತಹದ್ದು ಇವತ್ತಿನ ಸಂಪ್ರದಾಯ. ತನ್ನ ಸ್ವಂತಿಕೆ ಮತ್ತೊಂದು

ಇದೆಲ್ಲಾ ರಾಜಕಾರಣವನ್ನು ಪ್ರವೇಶ ಮಾಡಿದ ಮೇಲೆ ಎಲ್ಲವನ್ನೂ ಬದಿಗಿಡುವಂತಹ ಸಂಪ್ರದಾಯಗಳು ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಯಾರೂ ಸಹ ಇದಕ್ಕೆ ಹೊರತಾಗಿಲ್ಲ ಮಾತನಾಡಬಹುದು. ಆದರೆ, ಇದಕ್ಕೆ ಹೊರತು ಎಂದು ನಾನು ಹೇಳುತ್ತಿಲ್ಲ. ಆದರೆ, ಎಲ್ಲೋ ಒಂದು ತನಗೆ ಅನಿಸಿದ್ದನ್ನು ತಾನು ಯಾವುದೇ ಕ್ಷೇತ್ರದಲ್ಲಿದ್ದರೂ ಅದನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಹೇಳುವ ರೀತಿಯ ಒಂದು ಛಲದಂಕಮಲ್ಲನಾಗಿ ಸನ್ಮಾನ್ಯ ಬಂಗಾರಪ್ಪನವರ ರಾಜಕೀಯ ಜೀವನದಲ್ಲಿ ನಡೆದಿರುವುದನ್ನು ನಾವು ನೋಡಿದ್ದೇವೆ. ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ಅವರ ಹೊಸ ಹೊಸ ಯೋಚನೆಗಳನ್ನು ಯೋಜನೆಗಳನ್ನಾಗಿ ಪರಿವರ್ತಿಸಿದವರಲ್ಲಿ ಅವರು ಒಬ್ಬರು. ಹಲವಾರು ಹೊಸ ಹೆಸರುಗಳು ಬೇರೆ ಬೇರೆ ಯೋಜನೆಗಳಿಗೆ ಕೊಡುವುದನ್ನು ಪ್ರಾರಂಭ ಮಾಡಿದವರು ಸನ್ಮಾನ್ಯ ಬಂಗಾರಪ್ಪನವರು ಎಂದು ಹೇಳುವಂತಹದ್ದನ್ನು ನಾನು ಕೇಳಿದ್ದೇನೆ. ಅದು ಸಾಮಾನ್ಯ ಮನುಷ್ಯರಿಗೆ ಆ ಯೋಜನೆ ವಿಚಾರಗಳು ಅರ್ಥವಾಗುವಂತಹ ರೀತಿಯಲ್ಲಿ ಅದಕ್ಕೆ ನಾಮಕರಣ ಮಾಡುವಂತಹದ್ದು. ಈ ರೀತಿಯ Political Scenario ದಲ್ಲಿ ಒಂದು ಹೊಸ style of functioning ಮಾಡಿದಂತಹ ಒಬ್ಬ ಅದ್ಭುತ ವ್ಯಕ್ತಿ ಸನ್ಮಾನ್ಯ ಬಂಗಾರಪ್ಪನವರು ಎಂದು ನಾನು ತಿಳಿದುಕೊಳ್ಳುತ್ತೇನೆ. ಅದು ಕೂಡ ಸಾಧಾರಣವಾಗಿ ಒಂದೆರಡು ಬಾರಿ ಚುನಾಯಿತರಾದ ಮೇಲೆ ಮತ್ತೆ anti-incumbency ಬರುವಂತಹದ್ದು ಸ್ವಾಭಾವಿಕ. ಇವರು 7ನೇ ಬಾರಿ ಶಾಸಕರಾಗಿ ಆಯ್ಕೆಯಾದಂತಹವರು. ಲೋಕಸಭೆಯ ಸದಸ್ಯರಾಗಿ ಮೂರು ಬಾರಿ ಇದ್ದಂತಹದ್ದು. ಇದೆಲ್ಲಾ ಒಂದು ದಾಖಲೆ ಸೃಷ್ಟಿಸಿದಂತಹ ಸಂಗತಿಗಳು. ವಿಶೇಷವಾಗಿ ಅವರು ಹಿಂದುಳಿದ ವರ್ಗದ ನಾಯಕರಾಗಿ ಕೆಲಸ ಮಾಡಿದ್ದಾರೆ. ಹಿಂದುಳಿದ ನಾಯಕರು ಎಂದು ಕರೆಸಿಕೊಳ್ಳುವುದಕ್ಕೆ ಬಹಳ ಜನರಿಗೆ ಮನಸ್ಸಿರುತ್ತದೆ. ನಾಯಕರು ಎಂದು ಕರೆಸಿಕೊಳ್ಳುವುದಕ್ಕೆ ಮಾತ್ರ. ಆದರೆ, ಆ ಹಿಂದುಳಿದ ವರ್ಗದವರ ಬಗ್ಗೆ ಕಾಳಜಿ ಮತ್ತು ಅದನ್ನು ಅನುಷ್ಠಾನ ಮಾಡಬೇಕೆನ್ನುವ ವಿಚಾರಗಳು ಬಂದಾಗ ಆ ಅವಕಾಶಗಳು ಸಿಕ್ಕಿದಾಗ ಆ ಅವಕಾಶಗಳ ಮುಖಾಂತರ ಅದನ್ನು ಅತ್ಯಂತ ಯಶಸ್ವಿಯಾಗಿ ಮಾಡಿದಂತಹ

ಒಬ್ಬ ಅದ್ಭುತ ರಾಜಕಾರಣಿ ಶ್ರೀಯುತ ಬಂಗಾರಪ್ಪನವರು ಎಂದು ನಾನು ಭಾವಿಸುತ್ತೇನೆ. ನಮ್ಮ ಜೊತೆ ಸಹ ಸ್ವಲ್ಪ ಸಮಯ ಅವರು ಇದ್ದರು. ನಾವು ಲೋಕಸಭೆಯಲ್ಲಿ ಅವರ ಜೊತೆ ಒಡನಾಡಿಗಳಾಗಿದ್ದವರು. ಆದರೆ, ಅವರ working style ಬೇರೆಯಾಗಿತ್ತು. ಸಾಧಾರಣವಾಗಿ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋದ ತಕ್ಷಣ ಆ ಹಿಂದೆ ಇದ್ದಂತಹ ಪಕ್ಷದವರನ್ನು ಒಂದು ವಕ್ರದೃಷ್ಟಿಯಲ್ಲಿ ನೋಡುವಂತಹದ್ದು ಸ್ವಾಭಾವಿಕ. ಅದನ್ನು ಇಂದು ನಾವು ನೋಡುತ್ತಿದ್ದೇವೆ. ಬೇರೆ ಪಕ್ಷದಿಂದ ನಮ್ಮ ಪಕ್ಷಕ್ಕೆ ಬಂದಂತಹವರನ್ನು ಆ ಪಕ್ಷದವರು ಬೇರೆ ರೀತಿಯಲ್ಲಿ ನೋಡುತ್ತಾರೆ. ನಾವು ಅವರಿಗೆ ವಿಶೇಷ ಪ್ರೀತಿ ತೋರಿಸುವಂತಹದ್ದು ಸಾಮಾನ್ಯವಾಗಿ ನಡೆಯುತ್ತಿರುವಂತಹ ಸಂಗತಿಗಳು. ಆದರೆ, ಅವರಲ್ಲಿ ಹಾಗೆ ಇರಲಿಲ್ಲ. ಸಾಧಾರಣವಾಗಿ ನಾನು ಅವರನ್ನು ನೋಡುತ್ತಿದ್ದೆನು. ಆ ಕಾಂಗ್ರೆಸ್ ಪಕ್ಷದವರ ಜೊತೆ ಲೋಕಸಭೆಯಲ್ಲಿ ಅವರ ಸಂಬಂಧಗಳು ಹೇಗೆ ಇತ್ತು ಎಂದು ಹೇಳಿದರೆ ಏನೂ ನಡೆದೇ ಇಲ್ಲ, ಆ ಒಂದು ಪಕ್ಷದಲ್ಲಿಯೇ ಇದ್ದೇನೆ ಅನ್ನಿಸುವ ರೀತಿಯಲ್ಲಿ ಅವರ ಭಾವನಾತ್ಮಕ ಸಂಬಂಧಗಳನ್ನು ಇಟ್ಟುಕೊಂಡು ಅದ್ಭುತವಾದಂತಹ ರೀತಿಯಲ್ಲಿ ತನ್ನ ಸಹಪಾಠಿಗಳೊಂದಿಗೆ ನಡೆದುಕೊಳ್ಳುವಂತಹ ಒಬ್ಬ ವ್ಯಕ್ತಿಯಾಗಿದ್ದರು. ತನ್ನ ಅಧಿಕಾರದ ಅವಧಿಯನ್ನು ಪೂರ್ಣವಾಗಿ, ಅವರಿಗೆ ಏನೆಲ್ಲಾ ಸಮಾಜಕ್ಕೆ ಕೆಲಸ ಮಾಡಲಿಕ್ಕೆ ಸಾಧ್ಯವೋ ಅದೆಲ್ಲವನ್ನು ಮಾಡಿದಂತಹ ಒಬ್ಬ ಅದ್ಭುತ ವ್ಯಕ್ತಿ. ಯಾವ ರಾಜಕಾರಣಿಗಳು, ಅವರು ಎಷ್ಟೇ ದೊಡ್ಡ ರಾಜಕಾರಣಿಗಳಿದ್ದರೂ ಸಹ ಯಾರ ಪಟ್ಟಿಗೂ ಸಿಗದಂತಹ ವ್ಯಕ್ತಿಯಾಗಿದ್ದರು. ಮೈಗೆಲ್ಲಾ ಎಣ್ಣೆಯನ್ನು ಹಾಕಿಕೊಂಡು ರಾಜಕಾರಣ ಮಾಡಿದಂತಹವರು. ಆ ರೀತಿಯ ಒಬ್ಬ ಅದ್ಭುತ ರಾಜಕಾರಣಿ ಬಂಗಾರಪ್ಪನವರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನನ್ನ ಭಾವನೆ. ರಾಜಕೀಯ ಕ್ಷೇತ್ರದಲ್ಲಿ ಇವತ್ತು ಆ ರೀತಿಯ ವರ್ಚಸ್ಸುಗಳು ಬೇಕು. ತನ್ನ ಸ್ವಂತಿಕೆ, ತನ್ನ ವಿಚಾರ ಇದನ್ನೆಲ್ಲಾ ಉಳಿಸಿಕೊಂಡು ರಾಜಕಾರಣದಲ್ಲಿರಬೇಕು. ಆದರೆ, ಇವತ್ತು ಅಂತಹ ಸಂಗತಿಗಳು ಬಹಳ ಕಡಿಮೆಯಾಗಿದೆ. ಅವಕಾಶವಾದಿ ರಾಜಕಾರಣಿಗಳ ಸಂಖ್ಯೆ ಜಾಸ್ತಿ, ಸಮಯಸಾಧಕ ರಾಜಕಾರಣಿಗಳ ಸಂಖ್ಯೆ ಜಾಸ್ತಿ. ಒಟ್ಟಿನಲ್ಲಿ ಅಧಿಕಾರ

ಇರಬೇಕು ಎನ್ನುವ ಭಾವನೆಗಳು. ಆದರೆ, ಆ ಒಂದು ಅಧಿಕಾರದ ಜೊತೆ ತನ್ನ ಕರ್ತವ್ಯವನ್ನೂ ಸಹ ಜ್ಞಾಪಕ ಮಾಡಿಕೊಂಡು ಆ ಕರ್ತವ್ಯವನ್ನು ಯಶಸ್ವಿಯಾಗಿ ನಿಭಾಯಿಸುವಂತಹ ಕೆಲಸವನ್ನು ಅವರು ನಿರಂತರವಾಗಿ ಮಾಡಿದ್ದಾರೆ. ತನ್ನದೇ ಆದಂತಹ ಚಾಪನ್ನು ರಾಜಕೀಯದಲ್ಲಿ ಅವರು ಉಳಿಸಿಕೊಂಡಿದ್ದಾರೆ. ಪ್ರಾಯಶಃ ಇವತ್ತು ಅವರ ಅಗಲುವಿಕೆ ಕರ್ನಾಟಕದ ಇಡಿ ರಾಜಕಾರಣಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಭಾವಿಸುತ್ತಿದ್ದೇನೆ.

**ಶ್ರೀಯುತ ಮಂಚನಹಳ್ಳಿ ಮಹದೇವ್** ಅವರು ತುಂಬಾ ಸಣ್ಣ ಪ್ರಾಯದಲ್ಲಿ ನಮ್ಮನ್ನು ಅಗಲಿದ್ದಾರೆ. ಅವರಿಗೂ ತುಂಬಾ ಭವಿಷ್ಯ ಇತ್ತು. ಕಳೆದ ಸುಮಾರು 5–6 ತಿಂಗಳ ಹಿಂದೆ ನಾನು ಮೈಸೂರಿಗೆ ಹೋದಾಗ ನನಗೆ ಅವರು ಸಿಕ್ಕಿದ್ದರು. ರಾಜಕೀಯದ ಬಗ್ಗೆ ಒಂದಿಷ್ಟು ಮಾತನಾಡಿದರು. ಒಂದು ರೀತಿಯಲ್ಲಿ ಮುಂದಿನ ದಿನಗಳಲ್ಲಿ ವಿಧಾನಸಭೆಯನ್ನು ಪ್ರವೇಶ ಮಾಡಬೇಕೆನ್ನುವ ಹುಮ್ಮ ಮನಸ್ಸಿನಿಂದ ಅವರು ಆ ಭಾಗದಲ್ಲಿ ಕಾರ್ಯ ಚಟುವಟಿಕೆಯನ್ನು ಮಾಡುತ್ತಿದ್ದುದನ್ನು ನಾನು ಕಂಡಿದ್ದೇನೆ. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಪ್ರಾಯಶಃ ಒಬ್ಬ ಯುವ ನಾಯಕನನ್ನು ನಮ್ಮ ರಾಜ್ಯ ಕಳೆದುಕೊಂಡಿದೆ ಎಂದು ನಾನು ಭಾವಿಸುತ್ತಿದ್ದೇನೆ.

**ಶ್ರೀಯುತ ರಾಮಾ ಸಿದ್ಲಿಂಗ ನಿಡೋಣಿ** ಅವರು ರಾಯಭಾಗದಿಂದ ವಿಧಾನಸಭೆಯನ್ನು ಪ್ರವೇಶ ಮಾಡಿದಂತಹವರು. ಕೃಷಿಕರ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದಂತಹವರು, ಸ್ವತಃ ಕೃಷಿಕರಾಗಿ ಕೃಷಿ ಕ್ಷೇತ್ರದ ಬಗ್ಗೆ ಹಲವಾರು ವಿಚಾರಗಳನ್ನು ವಿಧಾನಸಭೆಯ ಒಳಗೆ ಪ್ರಸ್ತಾಪ ಮಾಡಿ ಕೃಷಿಕರ ಪರವಾಗಿ ನಿಂತಂತಹ ಒಬ್ಬ ರಾಜಕಾರಣಿ ಎಂದು ಕೇಳಿದ್ದೇವೆ.

**ಶ್ರೀಯುತ ಸೋಮಪ್ಪ ಸುವರ್ಣ** ರವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರು. ಅವರು ಇಡೀ ಹಿಂದುಳಿದ ವರ್ಗಗಳ ಸಮಾಜದ ನಾಯಕರಾಗಿ ಮೂಡಿ ಬಂದವರು. ಇಡೀ ಈಡಿಗ ಸಮಾಜದ ಒಬ್ಬ ನಾಯಕನಾಗಿ, ಆ ಸಮಾಜವನ್ನು ಕಟ್ಟುವಲ್ಲಿ ಮತ್ತು ಆ ಸಮಾಜದಲ್ಲಿ ಇದ್ದಂತಹ ನೂರಾರು ತೊಡಕುಗಳನ್ನು ನಿವಾರಣೆ ಮಾಡಲಿಕ್ಕೆ ಆ ಸಂಘದ

ಅಧ್ಯಕ್ಷರಾಗಿ ಅವರು ಕೆಲಸ ಮಾಡಿದ್ದನ್ನು ನಾನು ಕೇಳಿದ್ದೇನೆ. 9ನೇ ವಿಧಾನಸಭೆಗೆ ಅವರು **ಮುಲ್ಕಿ** ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಅಂತಹ ಒಬ್ಬ ಸಜ್ಜನ ರಾಜಕಾರಣಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ.

**ಶ್ರೀಯುತ ಸಿ.ವಿ.ಎಲ್. ಶಾಸ್ತ್ರಿ** ರವರು ಪ್ರಾಯಶಃ ಕನ್ನಡ ಚಿತ್ರೋದ್ಯಮ ಕಂಡಂತಹ ಒಬ್ಬ ಅದ್ಭುತ ವ್ಯಕ್ತಿ. ತನ್ನ ಎಲ್ಲಾ ಸರ್ವಸ್ವವನ್ನೂ ಕೂಡ ಚಿತ್ರೋದ್ಯಮಕ್ಕೆ ಧಾರೆ ಏರೆದವರು ಎನ್ನುವುದನ್ನು ನಾನು ಮೊನ್ನೆ ಮೊನ್ನೆ ಅವರ ಅಂತಿಮ ದರ್ಶನಕ್ಕೆ ಹೋದಂತಹ ಸಂದರ್ಭದಲ್ಲಿ ಅಲ್ಲಿ ಇದ್ದಂತಹ ಜನರು ಹೇಳಿದ್ದನ್ನು ಕೇಳಿದ್ದೇನೆ. ಪಾಯಶಃ ಹಲವಾರು ಹೊಸ ರೀತಿಯ ಸಿನಿಮಾಗಳನ್ನು ಇವತ್ತು ಕರ್ನಾಟಕದ ಜನರಿಗೆ ಅರ್ಪಣೆ ಮಾಡಿದಂತಹ ವ್ಯಕ್ತಿ ಅವರಾಗಿದ್ದರು. ಚಲನಚಿತ್ರೋದ್ಯಮದಲ್ಲಿ ಬೇರೆ ಬೇರೆ ಮಂಡಳಿಯ ಅಧ್ಯಕ್ಷರಾಗಿ, ಕೆಲವು ಸಂಘಟನೆಗಳ ಅಧ್ಯಕ್ಷರಾಗಿ ದುಡಿದಂತಹವರು. ಇವತ್ತು ಅವರ ಅಗಲುವಿಕೆಯಿಂದ ಚಿತ್ರರಂಗಕ್ಕೆ ತುಂಬಲಾರದ ನಷ್ಟವುಂಟಾಗಿದೆ ಎಂದು ನಾನು ಭಾವಿಸುತ್ತಿದ್ದೇನೆ.

ಕನ್ನಡ ಸಾಹಿತ್ಯ ಲೋಕದ ಒಬ್ಬ ಅದ್ಭುತ ವಿದ್ವಾಂಸ **ಡಾ॥ ಎಲ್. ಬಸವರಾಜು ರವರು** ನಿನ್ನೆ ನಿಧನರಾಗಿದ್ದಾರೆ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ಅಖಿಲ ಭಾರತದ ಶರಣ ಸಾಹಿತ್ಯದ ಅಧ್ಯಕ್ಷರಾಗಿ ಸುಮಾರು 50ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಇವರು ಲೋಕಾರ್ಪಣೆ ಮಾಡಿದ್ದಾರೆ ಎಂದು ಹೇಳುವುದನ್ನು ನಾವೆಲ್ಲರೂ ಕೇಳಿದ್ದೇವೆ. ಅವರಿಗೆ ಬೇರೆ ಬೇರೆ ಪ್ರಶಸ್ತಿಗಳು, ಅತ್ಯಂತ ಒಳ್ಳೆಯ ಪ್ರಶಸ್ತಿಗಳು ಸಿಕ್ಕಿರುತ್ತವೆ. ಇವರನ್ನು ನಾವು ಕಳೆದುಕೊಂಡಿದ್ದು, ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಈ ಎಲ್ಲಾ ಮಹನೀಯರುಗಳನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಇವರೆಲ್ಲರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ ಮತ್ತು ಇವರ ಕುಟುಂಬ ವರ್ಗದವರಿಗೆ ಇವರ ನಿಧನದಿಂದ ಉಂಟಾಗಿರುವ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಕೊಡಲಿ ಎನ್ನುವಂತಹ ಪ್ರಾರ್ಥನೆಯನ್ನು ಮಾಡಿ

ತಾವು ಮಂಡಿಸಿದಂತಹ ಈ ಒಂದು ಸಂತಾಪ ಸೂಚನೆಯನ್ನು ನಾನು ಅನುಮೋದಿಸುತ್ತೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಈ ದಿನ ನಮ್ಮ ನಾಡಿನ ಕೆಲವು ಹೆಸರಾಂತ ಗಣ್ಯರ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀಯುತ ಬಂಗಾರಪ್ಪನವರ ನಿಧನಕ್ಕೆ ಒಂದು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ, ಅದರ ಬಗ್ಗೆ ಕೆಲವು ಮಾತುಗಳನ್ನಾಡಲು ಇಷ್ಟಪಡುತ್ತೇನೆ ಮತ್ತು ಸಂತಾಪ ಸೂಚನೆ ಮಾಡಲಿಕ್ಕೂ ಬಯಸುತ್ತೇನೆ. ಮಾನ್ಯ ಶ್ರೀ ಬಂಗಾರಪ್ಪನವರು ಈ ರಾಜ್ಯ ಕಂಡ ಒಬ್ಬ ಶ್ರೇಷ್ಠ ರಾಜಕಾರಣಿ ಎಂದು ಹೇಳಬಹುದು. ಅವರಿಗೆ 'Mass Leader' ಎಂದು ಎಲ್ಲರೂ ಕರೆಯುತ್ತಿದ್ದರು. ಬಂಗಾರಪ್ಪನವರ ಸಭೆ ಎಂದು ಹೇಳಿದರೆ ಬಹಳಷ್ಟು ಜನರು ಸೇರುತ್ತಿದ್ದರು. ನನಗೆ ಆಶ್ಚರ್ಯ ಎಂದು ಹೇಳಿದರೆ ಇಲ್ಲಿ ಒಂದು ಬಾರಿ ದೊಡ್ಡ ಸಭೆ ಇತ್ತು. ನಮ್ಮ ಕ್ರಾಂಗ್ರೆಸ್‌ನ ರಾಷ್ಟ್ರಾಧ್ಯಕ್ಷರಾಗಿದ್ದಂತಹ ಶ್ರೀಯುತ ಸೀತಾರಾಂ ಕೇಸರಿಯವರು ಬಂದಿದ್ದರು. ಆ ಸಭೆಯಲ್ಲಿ ಶ್ರೀಯುತ ಬಂಗಾರಪ್ಪನವರು ವೇದಿಕೆ ಮೇಲೆ ನಿಂತುಕೊಂಡು ಕೆಲವರ ಹೆಸರುಗಳನ್ನಿಡಿದು ಕರೆಯುತ್ತಿದ್ದರು. ಅಷ್ಟು ದೊಡ್ಡ ಸಭೆಯಲ್ಲಿ ಕರೆಯುತ್ತಿದ್ದರು. ಅವರು ಅಲ್ಲಿ ಇದ್ದಾರೋ ಇಲ್ಲವೋ ಎಂದು ನನಗೆ ಗೊಂದಲವಿತ್ತು. ಅಹಃ ಏನಣ್ಣ ಚೆನ್ನಾಗಿದ್ದೀರಾ, ಹಾಗೇ, ಹೀಗೆ ಎಂದು ಹೇಳಿ ಮಾತನಾಡುತ್ತಿದ್ದರು. ಅವರನ್ನು ಗುರುತಿಸುವಂತಹ ಒಂದು ಚತುರತೆ ಅವರಲ್ಲಿ ಇತ್ತು. ಇಂತಹ ಊರು ಎಂದು ಹೇಳುವಂತಹದ್ದು, ಅವರನ್ನು ಕರೆದು ಮಾತನಾಡಿಸುವುದು, ಅವರ ಬೆನ್ನು ತಟ್ಟುವುದು ಈ ರೀತಿಯ ಕಲೆ ಅವರಲ್ಲಿ ಬಹಳ ಚೆನ್ನಾಗಿತ್ತು. ಅಷ್ಟೆ ಅಲ್ಲದೇ, ಕಲೆ ಇರಬಹುದು, ಸಾಹಿತ್ಯ ಇರಬಹುದು, ಅದರ ಬಗ್ಗೆ ಹೆಚ್ಚಿನ ಒತ್ತು ಕೊಡುತ್ತಿದ್ದರು. ಹಾಗೆಯೇ ಅಭಿವೃದ್ಧಿಯ ಬಗ್ಗೆ ಬಹಳಷ್ಟು ಒಂದು ಕಳಕಳಿ ಇದ್ದಂತಹ ವ್ಯಕ್ತಿಯಾಗಿದ್ದರು. ಹಿಂದುಳಿದ ವರ್ಗದ ಒಂದು ಧ್ವನಿಯಾಗಿದ್ದರು, ನಾಯಕರಾಗಿದ್ದರು ಎನ್ನುವುದು ಬೇರೆ ಆದರೂ ಕೂಡ ಎಲ್ಲಾ ಜನರ ಒಳಿತಿಗಾಗಿ, ಎಲ್ಲಾ ಜನರ ಅಭಿವೃದ್ಧಿಗಾಗಿ ಬಹಳ ಚಿಂತನೆ ಮಾಡುತ್ತಿದ್ದರು. ಅದರಲ್ಲೂ ದಲಿತರ ಬಗ್ಗೆ, ಮಹಿಳೆಯರ ಬಗ್ಗೆ ಒಳ್ಳೆಯ

ಕಾರ್ಯಕ್ರಮಗಳನ್ನು ಕೊಡುವ ದೃಷ್ಟಿಯನ್ನಿಟ್ಟುಕೊಂಡು ವಿಚಾರ ಮಾಡುತ್ತಿದ್ದರು. ಹಾಗಾಗಿ, ಅವರು ಮುಖ್ಯಮಂತ್ರಿಗಳಾದಾಗ ಈ ಒಂದು ಆಶ್ರಯ ಯೋಜನೆ ಬಗ್ಗೆ ನಿಮಗೆ ಮತ್ತು ನಮಗೆಲ್ಲಾ ಗೊತ್ತಿರುವ ಹಾಗೆ ಕಾಂಗ್ರೆಸ್ಸಿನ ಒಂದು ಬಹಳ ಪ್ರಮುಖವಾದ ಕಾರ್ಯಕ್ರಮವಾಗಿದ್ದು, ಜನತಾ ಮನೆಗಳನ್ನು ಹಂಚುವುದಾಗಿತ್ತು. ಅದಕ್ಕೆ ಆಶ್ರಯ ಮನೆ ಎಂದು ಕೊಟ್ಟು, ಯಾರು ನಿರಾಶ್ರಿತರು ಇರುತ್ತಾರೆ, ಅವನಿಗೆ ಒಂದು ಸೂರನ್ನೂ ಕಲ್ಪಿಸಿಕೊಡಬೇಕೆಂದು ಹೇಳಿ ಆಶ್ರಯ ಯೋಜನೆ ಎಂದು ಹೆಸರಿಟ್ಟು, ಸಾವಿರಾರು ಜನರಿಗೆ ಆಶ್ರಯ ಮನೆಗಳನ್ನು ಹಂಚುವ ಕೆಲಸವನ್ನು, ಸೈಟ್‌ಗಳನ್ನು ಹಂಚುವ ಕೆಲಸವನ್ನು ಮಾಡಿ ಇವತ್ತು ಸಹ ಆ ಯೋಜನೆ ನಮ್ಮ ರಾಜ್ಯದಲ್ಲಿ ಜಾರಿಯಲ್ಲಿದೆ ಎಂದು ಹೇಳಿದರೆ ಬಂಗಾರಪ್ಪನವರ ಹೆಸರ ಬಡವರ ಜೊತೆ ಇನ್ನೂ ಶಾಶ್ವತವಾಗಿ ಇರುತ್ತದೆ ಎನ್ನುವುದಕ್ಕೆ ಒಂದು ಸಾಕ್ಷಿ. ಹಾಗೆಯೇ 'ಆರಾಧನೆ' ಯೋಜನೆಯು ಕೂಡ ಹಳ್ಳಿಗಾಡಿನಲ್ಲಿ ಬಡವರು ಮಾರಮ್ಮ, ಸಣ್ಣ-ಸಣ್ಣ ಭೂತನ ಗುಡಿ ಇವುಗಳನ್ನೆಲ್ಲಾ ಕಟ್ಟಿಕೊಂಡು ಪೂಜೆಯನ್ನು ಮಾಡುತ್ತಾರೆ, ಅದಕ್ಕೆ ಅವರಿಗೆ ಸರಿಯಾದ ಒಂದು ನೆರವು ಇಲ್ಲದೇ, ಆ ಒಂದು ಗುಡಿಗಳನ್ನು ನಿರ್ಮಾಣ ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವ ದೃಷ್ಟಿಯಲ್ಲಿ ಅದನ್ನು ಪುನರ್‌ಜೀವನಗೊಳಿಸಲಿಕ್ಕೆ, ಮಾರ್ಪಾಡು ಮಾಡಲಿಕ್ಕೆ ಈ ಒಂದು 'ಆರಾಧನಾ' ಸ್ಕೀಂ ತಂದರು. ವಿಶ್ವ ಯೋಜನೆ ಕೂಡ ಒಂದು ಬಹಳ ಆಕರ್ಷಕವಾದ ಸ್ಕೀಂ ಆಗಿತ್ತು. ಯುವಕರಿಗೆ ಒಂದು ಸ್ವಯಂ ಉದ್ಯೋಗವನ್ನು ಕೊಡುವಂತಹ ಯೋಜನೆಯಾಗಿತ್ತು. ಆ ವಿಶ್ವ ಇಂಡಸ್ಟ್ರೀಯಲ್ಲಿ ನಮ್ಮ ಗುಡಿ ಕೈಗಾರಿಕೆಗಳು ಏನಿವೆ, ಅದನ್ನು ಸಣ್ಣ ಕೈಗಾರಿಕೆ ಮೂಲಕ ತರಬೇತಿ ಕೊಟ್ಟು, ಅವರ ಸ್ವಯಂ ಉದ್ಯೋಗಕ್ಕೆ ಒಂದು ರೀತಿಯಲ್ಲಿ ಆಸಕ್ತಿಯನ್ನು ಉಂಟು ಮಾಡುವಂತಹ ಯೋಜನೆ. ಅವರು ಒಂದು ದೊಡ್ಡ ಕನಸನ್ನು ಕಂಡಿದ್ದರು. ಹಾಗಾಗಿ, ಇವತ್ತು ಪ್ರತಿ ಜಿಲ್ಲೆಯಲ್ಲೂ ಕೂಡ ಆ ವಿಶ್ವ ಟ್ರೈನಿಂಗ್ ಕ್ಯಾಂಪಿಗೋಸ್ಕರ ಮಾಡಿದಂತಹ ಶೆಡ್‌ಗಳು ಖಾಲಿ ಬಿದ್ದಿವೆ. ಅದನ್ನು ನಮ್ಮ ಸರ್ಕಾರಗಳು ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲ. ಅಂತಹ ಒಬ್ಬ ವ್ಯಕ್ತಿ ಲ್ಯಾಂಡ್ ಟ್ರಿಬುನಲ್ ಬಂದಾಗ ಅವರು ಏನು ಶ್ರೀಯುತ ಗೋಪಾಲಗೌಡರ ಶಿಷ್ಯರಾಗಿ ಬಡವರ ಭೂಮಿಗೋಸ್ಕರ ಒಂದು

ಹೋರಾಟವನ್ನು ನಡೆಸಿದ್ದರು, ಆ ಒಂದು ಕನಸು ನನಸು ಆದ ಹಾಗೆ ಆ ಲ್ಯಾಂಡ್ ಟ್ರಿಬುನಲ್ ಸ್ಕೀಂ ಜಾರಿಗೆ ತಂದಾಗ ಬಹಳ ಸಂತೋಷಪಟ್ಟು ಲ್ಯಾಂಡ್ ಟ್ರಿಬುನಲ್ ಸ್ಕೀಂ ಅನ್ನು ಕಂದಾಯ ಸಚಿವರಾಗಿ ಬಹಳಷ್ಟು ಮಟ್ಟಿಗೆ ಅದನ್ನು ಜಾರಿಗೊಳಿಸಬೇಕು, ಬಡವರಿಗೆ, ಆ ಗೇಣಿದಾರನಿಗೆ ಆ ಭೂಮಿ ಸಿಗಬೇಕೆಂದು ಹೇಳಿ ಅವರ ಇರಾದೆ ಏನಿತ್ತು, ಅದರ ಬಗ್ಗೆ ಒಂದೊಂದು ತಾಲ್ಲೂಕಿನಲ್ಲಿ ಎರಡೆರಡು ಟ್ರಿಬುನಲ್ ಕಮಿಟಿ ಮಾಡಲಿಕ್ಕೆ ಅವರು ಮುಂದಾದರು. ಆ ರೀತಿಯ ಒಂದು ಕಮಿಟ್‌ಮೆಂಟ್ಸ್ ಅವರಲ್ಲಿತ್ತು.

(2.00 ಗಂಟೆ)

ಯಾವುದೇ ಒಬ್ಬ ರಾಜಕಾರಣಿ ಎಷ್ಟು ದಿವಸ ಅಧಿಕಾರದಲ್ಲಿರುತ್ತೇವೆ, ಮತ್ತು ಯಾವ ಒಂದು ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸುತ್ತೇವೆನ್ನುವುದು ನನ್ನ ದೃಷ್ಟಿಯಲ್ಲಿ ಮುಖ್ಯವಲ್ಲ. ನಮಗೆ ಅದರ ಬಗ್ಗೆ ಇಚ್ಛಾಶಕ್ತಿ ಇತ್ತು ಎಂದರೆ ನಾವು ಸಮರ್ಪಣ ಭಾವನೆಯಿಂದ ಕೆಲಸ ಮಾಡಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ಶ್ರೀಯುತ ಬಂಗಾರಪ್ಪನವರು ಮಾಡಿ ತೋರಿಸಿದರು. ಅವರು ಒಂದು ವರ್ಣರಂಜಿತ ವ್ಯಕ್ತಿತ್ವ ಹೊಂದಿದ್ದರು. ಜಾನಪದ ಕಲೆಗಳು ಎಂದು ಹೇಳಿದರೆ ಅವರಿಗೆ ಬಹಳ ಇಷ್ಟವಾದಂತಹ ಕಲೆಯಾಗಿದ್ದು, ಹೋದಂತಹ ಕಡೆಗಳಲ್ಲಿ ಅವರು ಡೋಲು ಬಾರಿಸುವವರ ಕಡೆ ಡೋಲು ಬಾರಿಸಿ, ಕುಣಿಯುತ್ತಿದ್ದರು. ತಾವಾಗಿಯೇ ನಿಂತು ಹಾಡುತ್ತಿದ್ದರು. ಮಾನ್ಯ ಶ್ರೀ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಶಾಸಕರ ದಿನಾಚರಣೆಯ ದಿನದಂದು ನಾವು ಮತ್ತು ಶ್ರೀಯುತ ಬಂಗಾರಪ್ಪನವರು, ಶ್ರೀಯುತ ವಿಶ್ವನಾಥ್‌ರವರು ಹಾಗೂ ಇತರ ಶಾಸಕರು ಸೇರಿ ಒಂದು ಗುಂಪು ಮಾಡಿಕೊಂಡು ಜನಪದ ಕಲೆಗಳಲ್ಲಿ ಭಾಗವಹಿಸುತ್ತಿದ್ದೆವು. "ಯಾರಾದರೂ ಗೆಲ್ಲುತ್ತೇವೆ, ಸುವ್ವ ಲಾಲಿ." ಎಂದು ಪದ್ಯವನ್ನು ಕಟ್ಟಿಕೊಂಡು ಹಾಡುತ್ತಿದ್ದೆವು. 'ಯಾರ್‍ಯಾರಿಗೆ ಟಿಕೆಟ್ಟು ಸುವ್ವಲಾಲಿ, ಗುಂಡೂರಾವ್ ಕೊಟ್ಟೋವರಿಗೆ ಟಿಕೆಟ್ ಸುವ್ವಲಾಲಿ" ಎಂದು ಬಹಳ ಖುಷಿಯಾಗಿ, ಆನಂದಪಟ್ಟುಕೊಂಡು ಆ ಒಂದು ಹಾಡನ್ನು ಎಲ್ಲರೂ ಸುವ್ವಿ–ಸುವಲಾಲಿ ಎನ್ನುವ ಹಾಡಿಗೆ ಧ್ವನಿ ಕೊಟ್ಟಿದ್ದು, ಇವತ್ತಿಗೂ ನನ್ನ ನೆನಪಿಗೆ

ಬರುತ್ತದೆ. ನಿಜವಾಗಿಯೂ ಸಹ ಅವರು ಅಂತಹ ಒಂದು ಕಳಕಳಿ ಹೊಂದಿದವರಾಗಿದ್ದರು. ಆ ರೀತಿಯ ಎಲ್ಲಾ ಪ್ರತಿಭೆಗಳನ್ನು ಇಟ್ಟುಕೊಂಡು ಅವುಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವಂತಹ ರಾಜಕಾರಣಿಗಳು ಇವತ್ತು ಬಹಳ ಕಡಿಮೆ. ಹಾಗೆ ಇದ್ದರೂ ಕೂಡ ಅದಕ್ಕೆ ಕೆಲವು ವೇಳೆ ಕಾಮೆಂಟ್ಸ್ ಬರುತ್ತದೆ. ನಾವು ಗಣಿಗಾರಿಕೆಯ ವಿರುದ್ಧ ನಾವು ಏನು ಪಾದಯಾತ್ರೆ ಮಾಡಿದೆವು, ಆ ಸಂದರ್ಭದಲ್ಲಿ ಹಳ್ಳಿಭಾಗದಲ್ಲಿ ಡೋಲು ತೆಗೆದುಕೊಂಡು ಬಂದು ಜಾನಪದ ಕಲೆಗೆ ತಕ್ಕಂತೆ ತಾವು ಹೆಜ್ಜೆ ಹಾಕಬೇಕೆಂದು ಹೇಳಿದಾಗ ನಾನು ಮತ್ತು ಶ್ರೀಯುತ ಸಿದ್ಧರಾಮಯ್ಯನವರು ಹೆಜ್ಜೆ ಹಾಕಿದ್ದಕ್ಕೆ ಒಂದು ದೊಡ್ಡ ಕಾಮೆಂಟ್ಸ್ ಮಾಡಿದರು. ಅದರ ಬಗ್ಗೆ ಯಾರಿಗೆ ಒಂದು ಕಳಕಳಿ ಇರುತ್ತದೆ, ಕಲೆಯ ಬಗ್ಗೆ ಆಸಕ್ತಿ ಇರುತ್ತದೆ. ಅವರು ಮಾತ್ರ ಆ ರೀತಿಯಲ್ಲಿ ನಡೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಒಬ್ಬ ಮುಖ್ಯಮಂತ್ರಿಯಾಗಿ ಡೋಲು ಬಾರಿಸುತ್ತಾರೆಂದು ಹೇಳಿದರೆ ಅದನ್ನು ನಾವು ಸಣ್ಣದಾಗಿ, ಕೀಳಾಗಿ ಕಾಣುವುದು, ಮಾತನಾಡುವುದು ಸರಿಯಲ್ಲವೆಂದು ನನಗೆ ಅನಿಸುತ್ತದೆ. ಅಷ್ಟೆ ಅಲ್ಲದೇ ಸಾಹಿತ್ಯವೂ ಕೂಡ ಅವರಿಗೆ ಬಹಳ ಇಷ್ಟವಾದುದಾಗಿತ್ತು. ಎಷ್ಟೋ ಒಳ್ಳೆಯ ಸಾಹಿತಿಗಳ ಬಗ್ಗೆ ಮತ್ತು ಸಾಹಿತ್ಯ ಅಧ್ಯಯನ ಮಾಡುವುದರಲ್ಲಿ ಒಂದು ರೀತಿಯಲ್ಲಿ ನಿಪುಣರಾಗಿದ್ದರು. ಎಷ್ಟೋ ಬಾರಿ ಕೆಲವು ಸಾಹಿತಿಗಳ ಬಗ್ಗೆ ಮಾತನಾಡುತ್ತಿದ್ದರು, ಅದರ ಬಗ್ಗೆ ಕಾಮೆಂಟ್ಸ್ ಮಾಡುತ್ತಿದ್ದುದರ ಬಗ್ಗೆ ಹತ್ತಿರದಿಂದ ನಾವು ನೋಡಿದ್ದೇವೆ. ಮುಖ್ಯಮಂತ್ರಿಗಳಾಗಿ ಅವರು ಒಳ್ಳೆಯ ಕೆಲಸ ಮಾಡಲಿಕ್ಕೆ ಮುಂದಾದರೂ ಕೂಡ ಸರಿಯೋ ತಪ್ಪೋ ಅವರಿಗೆ ಪೂರ್ಣ ಅವಧಿಯಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ನನಗೆ ಅನಿಸಿದ್ದು, ನಾನು ಅವರ ಹತ್ತಿರ ಒಂದು ಬಾರಿ ಗಲಾಟೆ ಮಾಡಿದ್ದೂ ಉಂಟು. ನಾನು ಅಭಿವೃದ್ಧಿಯ ವಿಚಾರವಾಗಿ ಬಹಳಷ್ಟು ಪತ್ರಗಳನ್ನು ಕೊಟ್ಟಿದ್ದೇನು. ಈಗಲೂ ಸಹ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಸದಾನಂದಗೌಡರಿಗೂ ಕೊಟ್ಟಿದ್ದೇನೆ, ಶ್ರೀಯುತ ಯಡಿಯೂರಪ್ಪನವರಿಗೂ ಕೊಟ್ಟಿದ್ದೆನು. ಆದರೆ, ಆ ಪತ್ರಗಳಿಗೆ ಬಂಗಾರಪ್ಪನವರಿಂದ ಒಂದೂ ರಿಪ್ಲೇ ಬರಲಿಲ್ಲ ಮತ್ತು ಕಾರ್ಯಗತವೂ ಆಗಲಿಲ್ಲ. ನಾನೊಮ್ಮೆ ಅವರ ಮನೆಗೆ

ಹೋಗಿ ಸರ್, ನೋಡಿ ಮೂಡಿಗೆರೆಗೆ ಒಂದು ಬಸ್ ನಿಲ್ದಾಣವಾಗಬೇಕು, ಒಂದು ತೋಟಗಾರಿಕೆ ಕಾಲೇಜು ಆಗಬೇಕು, ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡವಾಗಬೇಕೆಂದು ಸುಮಾರು 15 ಪತ್ರಗಳನ್ನು ನಾನು ಕೊಟ್ಟಿದ್ದೇನೆ. ಆದರೆ, ಅದು ಏನೂ ಆಗದಿದ್ದರೆ ನಾನು ಪತ್ರವನ್ನು ಏತಕ್ಕೆ ಕೊಡಬೇಕು, ನಾನು ಕೊಟ್ಟಿರುವ ಪತ್ರಗಳನ್ನು ವಾಪಸ್ಸು ಕೊಡಿ ಎಂದು ಗಲಾಟೆ ಮಾಡಿದೆನು. ಆ ಸಮಯದಲ್ಲಿ ಅವರ ಕಾರ್ಯದರ್ಶಿಯವರಾಗಿದ್ದ ಶ್ರಿಯುತ ಕೊಟೆಲಿಂಗನಗೌಡರು ಕೆಲಸ ನಿರ್ವಹಿಸುತ್ತಿದ್ದರು. ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಪತ್ರಗಳನ್ನು ಇಂತಹವರಿಗೆ ರವಾನೆ ಮಾಡಿದ್ದೇನೆಂದು ಹೇಳಿ ಎಂದು ಅವರ ಕಚೇರಿಯಿಂದ ಒಂದು ಮಾಹಿತಿ ಬರುತ್ತಿತ್ತು. ಆದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಬರೆಯಬಹುದಾಗಿತ್ತು. ಅದನ್ನು ಬಿಟ್ಟು ಅವರ ಕಾರ್ಯದರ್ಶಿಗಳು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಪತ್ರವನ್ನು ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ರವಾನೆ ಮಾಡಿದ್ದೇವೆಂದು ತೋರಿಸಲಾಗುತ್ತಿತ್ತು. ಅಂದರೆ ಇದರ ಅರ್ಥ ಏನು? ಈ ರೀತಿಯ ಕೆಲಸಗಳು ನನಗೆ ಬೇಕಾಗಿಲ್ಲ. ನನ್ನ ಪತ್ರಗಳನ್ನು ವಾಪಸ್ಸು ಕೊಡಿ ಎಂದು ಹೇಳಿ ಗಲಾಟೆ ಮಾಡಿದಾಗ ಮಾನ್ಯ ಶ್ರೀ ಬಂಗಾರಪ್ಪನವರು ಸಂಬಂಧಪಟ್ಟ ಕಾರ್ಯದರ್ಶಿಗಳನ್ನು ಕರೆಸಿ ಆ ಪತ್ರಗಳ ಬಗ್ಗೆ ಸರಿಯಾಗಿ ಬರೆದು ಕಳುಹಿಸಿದರು. ಆಗ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವಾಯಿತು, ಮೂಡಿಗೆರೆಗೆ ತೋಟಗಾರಿಕೆಯ ಕಾಲೇಜು ಬಂತು. ಈಗಿನ ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ಅಭಿವೃದ್ಧಿ ಕೆಲಸಗಳ ವಿಚಾರವಾಗಿ ಸ್ವಲ್ಪ ಪತ್ರಗಳನ್ನು ಬರೆದಿದ್ದೇನೆ. ಬಂದಿಷ್ಟು ಕೆಲಸವೂ ಆಗಿದೆ. ಇದೇ ರಿತಿಯಲ್ಲಿ ಕೆಲಸಗಳಾಗಬೇಕು. ಶ್ರೀಯುತ ಡಿ.ವಿ. ಸದಾನಂದಗೌಡರಿಗೂ ಪತ್ರವನ್ನು ಬರೆದಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ವಿರೋಧ ಪಕ್ಷದ ನಾಯಕರು ಪತ್ರವನ್ನೂ ಬರೆದಿದ್ದಾರೆ, ಆ ಪ್ರಕಾರ ಕೆಲಸಗಳನ್ನೂ ಸಹ ಮಾಡಿದ್ದೇನೆ.

**ಶ್ರೀಮತಿ ಮೋಟಮ್ಮ:-** ಎಲ್ಲಾ ಕೆಲಸಗಳೂ ಆಗಿಲ್ಲ. ಈಗಿನ ಮುಖ್ಯಮಂತ್ರಿಗಳು ಒಳ್ಳೆಯ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ. ಆದರೆ, ಸರಿಯೋ ತಪ್ಪೋ ಅವರ ಸಂಪುಟದಲ್ಲಿ ಕೆಲವು ಸಹದ್ಯೋಗಿಗಳು ಉತ್ತರಕ್ಕೆ ಮುಖ ಮಾಡಿ ಕುಳಿತರೆ ಕೆಲವು ದಕ್ಷಿಣಕ್ಕೆ ಮುಖ ಮಾಡಿ ಕುಳಿತುಕೊಳ್ಳುತ್ತಾರೆ. ಅವರುಗಳ ಮಧ್ಯದಲ್ಲಿ ಇವರು ಕುಳಿತುಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ. ಮುಂದೆ ಚೆನ್ನಾಗಿ ಆಗಲಿ, ಎಂದು ನನ್ನ ಆಸೆ ಇದೆ. ಒಟ್ಟಿನಲ್ಲಿ ಮುಖ್ಯಮಂತ್ರಿಗಳಾಗಿ ಅವರಿಗೆ ಜನರ ಬಗ್ಗೆ ಕಳಕಳಿ ಇದ್ದರೆ ಆ ಜನರ ಕೆಲಸ ಮಾಡಲಿಕ್ಕೆ ಅಷ್ಟು ಕಮಿಟ್ ಆಗಿರುತ್ತಾರೆ. ಆ ರೀತಿಯಲ್ಲಿ ಇರಬೇಕೆನ್ನುವುದು ನನ್ನ ಆಶಯವಾಗಿದೆ. ಆ ಒಂದು ಕೆಲಸವನ್ನು ಶ್ರೀಯುತ ಬಂಗಾರಪ್ಪನವರು ಮಾಡಿ ತೋರಿಸಿದ್ದರು ಎನ್ನುವ ಮಾತಿಗೆ ಈ ಒಂದು ಮಾತನ್ನು ಹೇಳುತ್ತಿದ್ದೇನೆ. ಅವರು ಒಂದು ತಪ್ಪು ಮಾಡಿದ್ದು ಎಂದರೆ ಏನೇ ಆಗಲಿ, ಒಂದು ಪಕ್ಷದಲ್ಲಿ ಇದ್ದ ಮೇಲೆ ಅಲ್ಲಿ ಒಂದು ಸಹನೆ ಬೇಕು. ಪಕ್ಷಾಂತರಿಗಳು ಆದಲ್ಲಿ, ತಮ್ಮ ದೊಡ್ಡ ವ್ಯಕ್ತಿತ್ವಕ್ಕೆ ಏನೋ ಒಂದು ಕುಂದು ಬಂದ ಹಾಗೆ ಆಗುತ್ತದೆ. ಪಕ್ಷದಿಂದ ಪಕ್ಷಕ್ಕೆ ಹೋಗುವುದರಿಂದ ಅವರು ಎಷ್ಟೇ ಸಂಪಾದನೆ ಮಾಡಿದರೂ ಸಹ ಅವರ ಒಳ್ಳೆಯ ಒಂದು ಹೆಸರಿಗೆ ಒಂದು ಸಣ್ಣ ಕಳಂಕ ಬಂದಂತಾಗುತ್ತದೆ. ಆ ರೀತಿಯ ತಪ್ಪನ್ನು ಮಾಡಿದರೇನೋ ಶ್ರೀಯುತ ಬಂಗಾರಪ್ಪನವರು ಎನಿಸುತ್ತದೆ. ಒಂದು ಪಕ್ಷದಲ್ಲಿ ಮುಖ್ಯಮಂತ್ರಿಯಾಗಿ, ಒಳ್ಳೆಯ ಖಾತೆಗಳ ಮಂತ್ರಿಯಾಗಿ, ಒಳ್ಳೆಯ ಕೆಲಸ ನಿರ್ವಹಣೆ ಮಾಡಿ ಕೊನೆಗೆ ಬೇರೆ ಪಕ್ಷಕ್ಕೆ ಹಾರಿದ್ದರ ಬಗ್ಗೆ ನನಗಂತೂ ಬೇಸರ ಇದೆ. ಯಾರಿಗೆ ಬೇಸರ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಬಗ್ಗೆ ರಾಜಕಾರಣಿಗಳಾದ ನಾವೂ ಸಹ ತಿಳಿದುಕೊಳ್ಳಬೇಕಾಗುತ್ತದೆ. ಒಂದು ತತ್ವ ಸಿದ್ಧಾಂತಕ್ಕೆ ಬದ್ಧರಾದ ಮೇಲೆ ಆ ಪಕ್ಷದಲ್ಲಿ ಏರುಪೇರು ಬಂದರೂ ಸಹ ಆ ಪಕ್ಷದಲ್ಲಿ ನಾವು ಗಟ್ಟಿಯಾಗಿ ನಿಂತರೆ ಮಾತ್ರ ನಮ್ಮ ವ್ಯಕ್ತಿತ್ವಕ್ಕೆ ಗಟ್ಟಿಯಾಗಿರುತ್ತದೆನ್ನುವುದು ನನ್ನ ಭಾವನೆ. ಆ ಕೆಲಸವನ್ನು ಅವರು ಮಾಡಲಿಲ್ಲ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮೇಡಂ, ಅವರು ಇರುವಾಗ ಚರ್ಚೆ ಮಾಡುವಂತಹ ವಿಚಾರ ಇದಾಗಿದೆ. ಆ ವಿಚಾರವಾಗಿ ಮಾತನಾಡುವ ಸಮಯ ಇದಲ್ಲ.

**ಶ್ರೀಮತಿ ಮೋಟಮ್ಮ:-** ಅದು ನಮಗೂ ಮುಂದೆ ಸಂದೇಶ ಆಗಬೇಕೆನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಆದ್ದರಿಂದ, ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಹಾರಾಟ ಮಾಡುವುದು ಸರಿಯಲ್ಲ ಎನ್ನುವ ಬಗ್ಗೆ ಹೇಳುತ್ತಿದ್ದೇನೆ. ಆ ವಿಚಾರ ನಮ್ಮ ಮನಸ್ಸಿಗೆ ಒಂದು ರೀತಿಯಲ್ಲಿ ಬೇಸರ ಇದೆ. ಏನೇ ಆಗಲಿ, ನಮ್ಮಂತಹ ಯುವ ರಾಜಕಾರಣಿಗಳಿಗೆ ಬಹಳಷ್ಟು ಪ್ರೋತ್ಸಾಹವನ್ನು ಅವರು ಕೊಡುತ್ತಿದ್ದರು. ಕೆಲಸ ಮಾಡುವುದರ ಬಗ್ಗೆ ಉತ್ತೇಜನವನ್ನು ಕೊಡುತ್ತಿದ್ದರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅಂತಹ ಒಬ್ಬ ನಾಯಕರನ್ನು ಇವತ್ತು ನಾವು ಕಳೆದುಕೊಂಡು ಈ ರಾಜ್ಯದ ರಾಜಕಾರಣ ಬರಿದಾಗಿದೆ ಎಂದು ನನಗೆ ಅನಿಸುತ್ತದೆ. ಉತ್ತಮ ರಾಜಕಾರಣಿಗಳು ನಮ್ಮ ರಾಜ್ಯದಲ್ಲಿ ಅವರ ಆದರ್ಶಗಳನ್ನು ಪಾಲನೆ ಮಾಡಿಕೊಂಡು ಹೋದರೆ ಇನ್ನಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯ ಎನ್ನುವ ಮಾತನ್ನು ಹೇಳುತ್ತಾ, ಅವರ ನಿಧನದಿಂದ ಅವರ ಕುಟುಂಬವರ್ಗದವರಿಗೆ ಹಾಗೂ ಅವರ ಬಂಧು ಮಿತ್ರರಿಗೆ ಆಗಿರುವಂತಹ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಮತ್ತು ಅವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇನೆ.

ಹಾಗೆಯೇ ನಮ್ಮ **ಶ್ರೀಯುತ ಸೋಮಪ್ಪ ಸುವರ್ಣ**ರವರು ಮಂಗಳೂರು ಮೂಲದಿಂದ ಬಂದವರಾಗಿದ್ದು, ಅವರಿಗೆ ಮಂಗಳೂರಿನ ಕರಾವಳಿ ಪ್ರದೇಶ ಎಂದು ಹೇಳಿದರೆ ಬಹಳ ಒಂದು ಹೆಮ್ಮೆಯ ಸಂಗತಿಯಾಗಿತ್ತು. ಅವರು ಮಾತನಾಡಬೇಕಾದರೆ ಅವರ ಬಾಯಿಯಿಂದ ಅದೇ ರೀತಿಯಲ್ಲಿ ಬರುತ್ತಿತ್ತು. ನಮ್ಮ ಕರಾವಳಿ ಪ್ರದೇಶ, ನಮ್ಮ ಮೀನುಗಾರರು, ನಮ್ಮ ರಸ್ತೆಗಳು ಎಂದು ಬಹಳ ತುಂಬು ಮನಸ್ಸಿನಿಂದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಶ್ರೀಯುತ ಸೋಮಪ್ಪ ಅವರು ಕೆಲಸ ಮಾಡುತ್ತಿದ್ದರು. 1989ರಲ್ಲಿ ನಮ್ಮ ಜೊತೆ ಶಾಸಕರಾಗಿ ಕೆಲಸ ಮಾಡಿದ್ದರು.

ಆದರೆ, ಸರಿಯೋ ತಪ್ಪೋ ಒಂದು ಅವಕಾಶ ಸಿಕ್ಕಿ ಮುಂದೆ ಅವರು ಶಾಸಕಾಂಗ ಸಭೆಗೆ ಬರಲಿಕ್ಕೆ ಆಗಲಿಲ್ಲ. ಇವತ್ತು ಅವರು ನಮ್ಮನ್ನು ಆಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಹಾಗೆಯೇ, **ಶ್ರೀಯುತ ಮಂಚನಹಳ್ಳಿ ಮಹದೇವರವರು** ಯುವಕರು ಎಂದು ನಾನು ಕೇಳಿದ್ದೆನು. ಅವರು ನನಗೆ ಪರಿಚಯವಿರಲಿಲ್ಲ. ಅವರು ಸಣ್ಣ ವಯಸ್ಸಿನಲ್ಲಿಯೇ ಇವತ್ತು ನಮ್ಮಿಂದ ಒಬ್ಬ ರಾಜಕಾರಣಿಯಾಗಿ ದೂರ ಆಗಿದ್ದು, ದುರಂತವೆಂದು ನಾನು ಭಾವಿಸುತ್ತೇನೆ. ಅವರು ನಮ್ಮನ್ನು ಆಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಹಾಗೆಯೇ **ಶ್ರೀ ರಾಮಾ ಸಿದ್ಲಿಂಗ ನಿಡೋಣಿ ಅವರು** ಕೂಡ ಇಂದು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಹಾಗೆಯೇ **ಶ್ರೀ ಸಿ.ವಿ.ಎಲ್. ಶಾಸ್ತ್ರಿ ರವರು** ನಮ್ಮ ಹೆಸರಾಂತ ಕನ್ನಡ ಚಿತ್ರೋದ್ಯಮಿಗಳಲ್ಲಿ ಬಹಳ ಶ್ರೇಷ್ಠರಾದಂತಹವರು. ಅವರ ಕೆಲವೊಂದು ಸಿನಿಮಾಗಳು ಏನಿವೆ, ಅದರಲ್ಲೂ ಮಲಯ ಮಾರುತ ಸಿನಿಮಾವನ್ನು ನಾನು ನೋಡಿದ್ದೇನೆ. ಅದು ನನಗೆ ತುಂಬಾ ಇಷ್ಟವಾದಂತಹ ಸಿನಿಮಾ ಆಗಿದೆ. ಅದರಲ್ಲಿ ಸಂಗೀತವನ್ನೂ ಕೂಡ ತುಂಬಾ ಚೆನ್ನಾಗಿ ಅವರು ಅಳವಡಿಸಿದ್ದರು. ಆತಂಕ ಚಿತ್ರವನ್ನೂ ಸಹ ನಾನು ನೋಡಿದ್ದೆನು. ಹಾಗೆಯೇ ಇವತ್ತಿನ ಒಂದು ಚಿತ್ರ ನಿರ್ದೇಶನ ಮತ್ತು ಚಿತ್ರಗಳ ಹೆಸರುಗಳನ್ನು ಕೇಳಿದರೆ ಬಹಳ, ಇತ್ತೀಚೆಗೆ "ಕೋ ಕೋ" ಎನ್ನುವ ಚಿತ್ರ ಬಂದಿದೆ. ಅದು ಏನು 'ಕೋ ಕೋ' ಎನ್ನುವುದು ಗೊತ್ತಿಲ್ಲ. ಚಲನಚಿತ್ರಗಳಿಗೆ ಈ ರೀತಿಯ ಹೆಸರುಗಳನ್ನಿಡುತ್ತಾರೆ. 'ಮಲಯ ಮಾರುತ', 'ಆತಂಕ' ಎನ್ನುವುದು ಎಂತಹ ಒಳ್ಳೆಯ ಹೆಸರು. ಇಂತಹ ಹೆಸರುಗಳಿಗೆ ಒಂದು ಒಳ್ಳೆಯ ಅರ್ಥವಿರುತ್ತದೆ. ನಾನು ಕೆಲವು ಚಲನಚಿತ್ರಗಳ ಹೆಸರು ಹೇಳಿದ್ದನ್ನು ಕೇಳಿ ಮಾನ್ಯ ಮುಖ್ಯಮಂತ್ರಿಯವರಿಗೂ ನಗು ಬರುತ್ತಿದೆ. 'ವಲಯ ಮಾರುತ' ಚಿತ್ರದ ಹಾಡುಗಳು ಸಹ ಅಷ್ಟೇ ಚೆನ್ನಾಗಿವೆ. ನನಗೆ ಒಂದೊಂದು ಸಾರಿ ಅನ್ನಿಸುತ್ತದೆ, ಏಕೆ ಈ ರೀತಿಯಾಗಿ ಮಾಡುತ್ತಾರೆ? ಅವರಿಗೆ ಏನು stuff ಸಿಗುವುದೇ ಇಲ್ಲವೇ? ಚಿತ್ರೀಕರಣವನ್ನು ಮಾಡುವುದಕ್ಕೆ

ನಮ್ಮ ಬದುಕಿನ ಹಲವಾರು ಸ್ತರಗಳಿವೆ. ಈ ಹಲವಾರು ಸ್ತರಗಳಲ್ಲಿ ಉತ್ತಮವಾದ ಬದುಕನ್ನು ಚಿತ್ರೀಕರಣ ಮಾಡಿ ಸಮಾಜಕ್ಕೆ ಒಂದು ಹೊಸತನವನ್ನು, ಸಂದೇಶವನ್ನು ಕೊಡುವಂಥ ಕೆಲಸವನ್ನು ಮಾಡಬಹುದು. ಶ್ರೀ ಸಿ.ವಿ.ಎಲ್. ಶಾಸ್ತ್ರಿಯವರು ಎಲ್ಲದಕ್ಕಿಂತ ಹೊರತಾಗಿ ಬಹಳ ಒಳ್ಳೆಯ ಚಿತ್ರವನ್ನು ಸಮಾಜಕ್ಕೆ ಕೊಟ್ಟು ಸಮಾಜದಲ್ಲಿ ಒಂದು ಬದಲಾವಣೆಯನ್ನು ತರುವ ಕೆಲಸವನ್ನು ಮಾಡಿದರು ಎಂದು ಹೇಳಿದರೆ ತಪ್ಪಾಗಲಾರದು. ಶ್ರೀ ಸಿ.ವಿ.ಎಲ್. ಶಾಸ್ತ್ರಿಯವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ.

ಇನ್ನು ಸಾಹಿತಿಗಳಾದ ಡಾ॥ ಎಲ್. ಬಸವರಾಜುರವರ ನಿಧನದ ಬಗ್ಗೆ ನಾನು ಇಂದಿನ ಪತ್ರಿಕೆಯಲ್ಲಿ ನೋಡಿದೆ. ಪತ್ರಿಕೆಯಲ್ಲಿ ನಾನು ಅವರ ಬಗ್ಗೆ ಓದಿದಾಗ ನನಗೆ ಬಹಳ ಹೆಮ್ಮೆ ಎನಿಸಿತು. ಅವರು ಸಮಾಜದಲ್ಲಿ ಸಮಾನತೆಯನ್ನು ತರಬೇಕು, ಡಾ॥ ಅಂಬೇಡ್ಕರ್‌ರವರು ಮತ್ತು ಬಸವಣ್ಣನವರನ್ನು ಒಟ್ಟಾಗಿ ಇಟ್ಟುಕೊಂಡು ಸಮಾಜದಲ್ಲಿ ಹೇಗೆ ಸಮಾನತೆಯನ್ನು ತರಲಿಕ್ಕೆ ಸಾಧ್ಯ, ಹೇಗೆ ನ್ಯಾಯವನ್ನೊದಗಿಸಬೇಕು ಎನ್ನುವ ಕೆಲಸವನ್ನು ಮಾಡಿದಂಥ ವ್ಯಕ್ತಿ ಎನ್ನುವುದನ್ನು ಓದಿ ಹೆಮ್ಮೆ ಎನಿಸಿತು. ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಿದ ನನಗೆ ಅವರ ಬಗ್ಗೆ ವಿಶೇಷವಾದ ಗೌರವವಿದೆ. ಅವರು ನಿಜವಾಗಿಯೂ ರಾಜ್ಯ ಕಂಡ ಒಬ್ಬ ಶ್ರೇಷ್ಠ ಸಾಹಿತಿ. ಅಂತಹವರು ಇವತ್ತು ನಿಧನರಾಗಿರುವುದರಿಂದ ನಮಗೆ ಬಹಳ ದುಃಖವಾಗುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿಯೂ ಒಂದು ಶೂನ್ಯ ಕಂಡ ಹಾಗಾಗುತ್ತದೆ. ಅದನ್ನು ತುಂಬುವಂಥ ಕೆಲಸವನ್ನು ಅವರ ಕೃತಿಗಳನ್ನು ಓದುವುದರ ಮೂಲಕ, ಅವರು ಬರೆದಂತಹ ಬರಹಗಳನ್ನು ಕಲಿಯುವುದರ ಮೂಲಕ ನಾವುಗಳು ಅವರಿಗೆ ಹೆಚ್ಚಿನ ಗೌರವವನ್ನು ತಂದುಕೊಡುವ ಕೆಲಸವನ್ನು ಮಾಡಬೇಕು ಎಂದು ಹೇಳುತ್ತಾ, ಮೃತರೆಲ್ಲರ ಆತ್ಮಕ್ಕೆ ಈ ಸಂದರ್ಭದಲ್ಲಿ ಶಾಂತಿಯನ್ನು ಕೋರಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ಇಂದು ಮಹಾತ್ಮ ಗಾಂಧಿಯವರು ಹುತಾತ್ಮರಾದ ದಿನವೂ ಸಹ ಆಗಿದೆ.

**ಸಭಾಪತಿಯವರು:–** ಅದರ ಬಗ್ಗೆ ಈಗಾಗಲೇ ಬೆಳಿಗ್ಗೆ ಎಲ್ಲರೂ ನೆನಪು ಮಾಡಿಕೊಂಡಿದ್ದೇವೆ.

## 5. ಪ್ರಕಟಣೆಗಳು

**ಸಭಾಪತಿಯವರು:–**

ಕಳೆದ ಅಧಿವೇಶನದ ಸಂದರ್ಭದಲ್ಲಿ ಪ್ರಕಟಿಸಲಾಗಿರುವ ಕೆಳಕಂಡ ಸದಸ್ಯರುಗಳನ್ನು ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡಲು ಪ್ರಸಕ್ತ ಅಧಿವೇಶನದಲ್ಲೂ ಮುಂದುವರಿಸಲಾಗಿದೆ.

01. ಶ್ರೀ ಬಸವರಾಜ ಹೊರಟ್ಟಿ

02. ಶ್ರೀ ಎನ್. ತಿಪ್ಪಣ್ಣ

03. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ

04. ಶ್ರೀ ಡಿ.ಎಸ್. ವೀರಯ್ಯ

ಹಾಗೂ ಕಳೆದ ಅಧಿವೇಶನದ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಸಭಾಪತಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಪ್ರಸಕ್ತ ಅಧಿವೇಶನದಲ್ಲೂ ಮುಂದುವರಿಸಲಾಗಿದೆ. ಅದರಂತೆ ಈ ಕೆಳಕಂಡವರು ಸದಸ್ಯರಾಗಿರುತ್ತಾರೆ.

01. ಶ್ರೀಮತಿ ವಿಮಲ ಗೌಡ, ಮಾನ್ಯ ಉಪ ಸಭಾಪತಿಗಳು

02. ಡಾ॥ ವಿ.ಎಸ್. ಆಚಾರ್ಯ, ಮಾನ್ಯ ಸಭಾನಾಯಕರು ಮತ್ತು ಉನ್ನತ ಶಿಕ್ಷಣ ಸಚಿವರು

03. ಶ್ರೀಮತಿ ಮೋಟಮ್ಮ, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು

04. ಡಾ॥ ಎ.ಹೆಚ್. ಶಿವಯೋಗಿಸ್ವಾಮಿ, ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು

05. ಶ್ರೀ ಆರ್.ವಿ. ವೆಂಕಟೇಶ್, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

06. ಶ್ರೀ ವಿ.ಆರ್. ಸುದರ್ಶನ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು

07. ಶ್ರೀ ಎಂ.ಸಿ. ನಾಣಯ್ಯ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು

08. ಶ್ರೀ ವೀರಣ್ಣ ಮತ್ತಿಕಟ್ಟಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು

**ಹಾಗೂ ಈ ಕೆಳಕಂಡವರು ವಿಶೇಷ ಆಹ್ವಾನಿತರಾಗಿರುತ್ತಾರೆ.**

01. ಶ್ರೀ ಡಿ.ವಿ. ಸದಾನಂದಗೌಡ, ಮಾನ್ಯ ಮುಖ್ಯಮಂತ್ರಿಯವರು

02. ಶ್ರೀ ಎಸ್. ಸುರೇಶ್ ಕುಮಾರ್, ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಸಚಿವರು

03. ಶ್ರೀ ಬಸವರಾಜ ಹೊರಟ್ಟಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು

04. ಶ್ರೀ ರಾಮಚಂದ್ರಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು

05. ಶ್ರೀ ಮನೋಹರ್ ಮಸ್ಕಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು.

ಮತ್ತು ವಿಧಾನ ಮಂಡಲದ ಉಭಯ ಸದನಗಳ ಮಾನ್ಯ ಸದಸ್ಯರುಗಳು ವೀಕ್ಷಿಸಲು ಅನುವಾಗುವಂತೆ ಈ ದಿನ ದಿನಾಂಕ: 30.01.2012 ರಂದು ಕಾರ್ಯಕಲಾಪವನ್ನು ಮುಂದೂಡಿದ ನಂತರ 'ಗಾಂಧಿ ಸ್ಮೈಲ್' ಎಂಬ ಚಲನಚಿತ್ರ ಪ್ರದರ್ಶನವನ್ನು ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಮಾನ್ಯ ಸದಸ್ಯರುಗಳು ಚಲನಚಿತ್ರ ವಿಕ್ಷಣೆಗೆ ಆಗಮಿಸಬೇಕೆಂದು ಕೋರುತ್ತೇನೆ ಹಾಗೂ ಭೋಜನದ ವ್ಯವಸ್ಥೆಯನ್ನು ಸಹ ಏರ್ಪಡಿಸಲಾಗಿದೆ.

ಕರ್ನಾಟಕದಲ್ಲಿ ಬಹಳ ಅಪರೂಪಕ್ಕೆ ಈ ಒಂದು ಚಲನಚಿತ್ರ ಬಂದಿದೆ. ಮಾನ್ಯ ದೊಡ್ಡರಂಗೇಗೌಡರು ಹಾಗೂ ಇತರೆ ಸ್ನೇಹಿತರು ಅಪೇಕ್ಷೆ ಪಟ್ಟ ಕಾರಣ 'ಗಾಂಧಿ ಸ್ಮೈಲ್' ಎನ್ನುವ ಚಲನಚಿತ್ರವನ್ನು ವೀಕ್ಷಿಸಲು ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ನಾವು ಪ್ರಸ್ತಾಪಿಸಿದಂಥ ಪ್ರಶ್ನೋತ್ತರ ವೇಳೆ, ನಿಯಮ 330 ಮೇರೆಗೆ ಮತ್ತು ಗಮನ ಸೆಳೆಯುವ ಸೂಚನೆಗಳಿಗೆ ಇವತ್ತಿನವರೆವಿಗೂ ಉತ್ತರಗಳು ಬಂದಿಲ್ಲ. ನಾವು ಬಹಳಷ್ಟು ಸಾರಿ ಹೇಳಿದ್ದೇವೆ. ಸದನದಲ್ಲಿ ಚರ್ಚೆಯಾಗಿದ್ದರೂ ಸಹ ಸರ್ಕಾರದಿಂದ ಉತ್ತರ ಬಂದಿಲ್ಲ.

**ಸಭಾಪತಿಯವರು:–** ಖಂಡಿತ ಅದರ ಬಗ್ಗೆ ಗಮನ ಹರಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ತಾವು ಪ್ರತಿ ಸಾರಿ ಹೇಳುತ್ತೀರಿ. ಆದರೆ ಉತ್ತರಗಳೇ ಬರುವುದಿಲ್ಲ. ತಾವು ಹೇಳಿದ್ದರೂ ಸಹ ಉತ್ತರಗಳನ್ನು ಕೊಡುವುದೇ ಇಲ್ಲ.

**ಸಭಾಪತಿಯವರು:–** ನಾನು ಈ ವಿಚಾರದ ಬಗ್ಗೆ ಸರ್ಕಾರದ ಜೊತೆಗೆ ಮತ್ತೊಮ್ಮೆ ಮಾತನಾಡುತ್ತೇನೆ ಹಾಗೂ ಮಾನ್ಯ ಮುಖ್ಯಮಂತ್ರಿಯವರಿಗೂ ಸಹ ಹೇಳುತ್ತೇನೆ.

ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಮಧ್ಯಾಹ್ನ 2 ಗಂಟೆ 16 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 31ನೇ ಜನವರಿ ಮಾಹೆ 2012ರ ಮಂಗಳವಾರದಂದು ಬೆಳಿಗ್ಗೆ 11.00 ಸೇರಲು ನಿಶ್ಚಯಿಸಿತು)**